WPP No. SK/MNG/WPP/69 D.O.P - 15th of every month from Udupi HPO

ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2010

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**

ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.

ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.


ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-10 ಸಂಚಿಕೆ-8 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ಶ್ರೀ ಕೃಷ್ಣಾಯನ
- ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು
ಪುಟ-2

''ಹರಿಕಥೆ ಅಪೇಕ್ಷಿತವೇ? ಅನಪೇಕ್ಷಿತವೇ?-೬
- ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್.
ಪುಟ-4



ಹನಿಗವನಗಳು
MNS
ಮಾರ್ಪಳ್ಳಿ ಆರ್. ಮಂಜುನಾಥ್ ಶಿವಮೊಗ್ಗ
ರಾಜೇಂದ್ರ, ಕೇದಿಗೆ
ಪುಟ-5



ಉತ್ತಮ ಚಿತ್ರಕಲಾವಿದೆ - ಡಾ। ಗುಣಸಾಗರಿ ರಾವ್
ಕೆ.ದಿನಮಣಿ ಶಾಸ್ತ್ರಿ, ಬ್ರಹ್ಮಾವರ
ಪುಟ-3

## ಮಂಗಳೂರು ಶ್ರೀ ಸುಬ್ರಹ್ಮಣ್ಯಸಭಾ : ''ಆಟಿದೊ ಆಟಕೂಟ''



ಶ್ರೀಸುಬ್ರಹ್ಮಣ್ಯ ಸಭಾದ ಯುವವೇದಿಕೆ ಹಾಗೂ ಮಹಿಳಾ ವೇದಿಕೆಯ ಆಶ್ರಯದಲ್ಲಿ ''ಆಟಿದೊ ಆಟ ಕೂಟ'' ಎಂಬ ವಿಶಿಷ್ಟ ಕಾರ್ಯಕ್ರಮ ತಾ.25-07-2010ರ ರವಿವಾರದಂದು ನಡೆಯಿತು. ಬೆಳಿಗ್ಗೆ ನಡೆದ ಕೇರಂ ಪಂದ್ಯಾಟವನ್ನು ಶ್ರೀಯುತ ರಘುರಾಮ್ ಶರ್ಮ ಹಾಗೂ ಶ್ರೀಯುತ ಎನ್.ಮೋಹನರಾಯರು ಕೇರಂ ಆಡುವ ಮೂಲಕ ಉದ್ಘಾಟಿಸಿದರು. 16 ವರುಷದವರಿಂದ ಮೇಲ್ಪಟ್ಟು ಹಾಗೂ 16 ವರುಷದವರಿಂದ ಕೆಳಗಿನವರು ಎಂಬ ಎರಡು ವಿಭಾಗದಲ್ಲಿ ಸ್ಪರ್ಧೆ ನಡೆಯಿತು.

ಶ್ರೀ ಸತ್ಯನಾರಾಯಣಪೂಜೆ ನಡೆದು ಮಧ್ಯಾಹ್ನ ಭೋಜನಾನಂತರ ಅಂತಿಮ ಪಂದ್ಯವನ್ನು ಆಡಲಾಯಿತು. ಶ್ರೀಮತಿ ಸ್ನೇಹಲತಾ ದಿವಾಕರ್‌ರವರು 'ಆಟಿ'ಯ ಬಗ್ಗೆ ಸ್ವರಚಿತ ಕವನವನ್ನು ವಾಚಿಸಿದರು. ನಂತರ ನಡೆದ ಕರೋಕೆ ರಸಮಂಜರಿಯಲ್ಲಿ ಹಲವಾರು ಸಮಾಜದ ಪ್ರತಿಭೆಗಳು ತಮ್ಮ ಪ್ರತಿಭಾ ಪ್ರದರ್ಶನ ನಡೆಸಿ ಸಭಿಕರ ಮನಗೆದ್ದರು.

ಶ್ರೀ ನಾಗರಾಜ ವರ್ಕಾಡಿ ಕಾರ್ಯಕ್ರಮ ನಿರೂಪಿಸಿದರು. ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ಸಂಯೋಜಿಸಿದರು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಚಂದಗಾಣಿಸಿಕೊಟ್ಟರು

ವರದಿ : ಪಿ.ಶ್ರೀಕಾಂತ್‌ರಾವ್

### ನಂದಳಿಕೆ ಮೂಡುಮನೆ ಗಿರಿಜಮ್ಮ ಸುಬ್ಬರಾವ್ ಸ್ಮರಣಾರ್ಥ

## ಉಚಿತ ಬರೆಯುವ ಪುಸ್ತಕಗಳ ಕೊಡುಗೆ



ಜೂನ್ 22ರಂದು ಶ್ರೀ ವಿದ್ಯಾಬೋಧಿನಿ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ। ಯಸ್. ಸುಬ್ಬರಾವ್ ಆರಂಭದಲ್ಲಿ ಅಧ್ಯಾಪಕರಾಗಿ ಸೇವೆ ಮಾಡಿದ ಪ್ರಯುಕ್ತ ಅವರ ನೆನಪಿಗಾಗಿ ಅಮೇರಿಕದಲ್ಲಿರುವ ಅವರ ಮೊಮ್ಮಗಳು ಡಾ। ಕಿರಣ್ ಶ್ರೀಹರ್ಷ ಇವರು ಸುಮಾರು 5 ಸಾವಿರ ರೂಪಾಯಿ ಮೌಲ್ಯದ ಉಚಿತ ಬರೆಯುವ ಪುಸ್ತಕವನ್ನು ಪ್ರತಿವರ್ಷದಂತೆ ಈ ವರ್ಷವೂ ವಿತರಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಎ.ಇ.ಒ. ಸುಬ್ರಹ್ಮಣ್ಯರವರು ವಹಿಸಿದರು. ಶಾಲಾ ಮುಖ್ಯ ಶಿಕ್ಷಕ ಅನಿಲ್‌ಕುಮಾರ್ ಸ್ವಾಗತಿಸಿದರು. ಶಾಲಾ ಸಂಚಾಲಕರಾದ ಯು. ಶೇಷಗಿರಿ ಕಾಮತ್ ದಾನಿಗಳಿಗೆ ಕೃತಜ್ಞತೆ ಅರ್ಪಿಸಿದರು. ಶಾಲಾ ಸಹಶಿಕ್ಷಕ ಯನ್.ಸುಧಾಕರರಾವ್ ಕಾರ್ಯಕ್ರಮ ನಿರ್ವಹಿಸಿದರು.

ದಾನಿಗಳ ಪರವಾಗಿ ಅವರ ತೀರ್ಥರೂಪರಾದ ಎನ್. ಕೃಷ್ಣರಾವ್, ನಿವೃತ್ತ ಉಪನ್ಯಾಸಕರು ಹಾಗೂ ಮಾತೃಶ್ರೀಯವರಾದ ಶಾರದಾ ಕೆ. ರಾವ್ ಪುಸ್ತಕವನ್ನು ವಿತರಿಸಿ ಇದೇ ರೀತಿ ಮುಂದೆಯೂ ಸಹಕರಿಸುವುದಾಗಿ ತಿಳಿಸಿದರು.

## ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ದೇಶಕರಾಗಿ ಶ್ರೀ ಎಂ. ಆರ್.ವಾಸುದೇವ್



ಶ್ರೀ ಎಂ.ಆರ್.ವಾಸುದೇವ್ ಇದೀಗ ಪುನಃ ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ದೇಶಕರಾಗಿ ತಾ.14-7-2010 ರಂದು ಅಧಿಕಾರ ಸ್ವೀಕರಿಸಿದ್ದಾರೆ. ಇವರು ಮೊದಲು ಮಂಗಳೂರು ಬಜ್ಪೆ ವಿಮಾನ ನಿಲ್ದಾಣ ನಿರ್ದೇಶಕರಾಗಿದ್ದು, ತನ್ನ ಅಧಿಕಾರಾವಧಿಯಲ್ಲಿ ಆ ನಿಲ್ದಾಣವನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನಾಗಿಸುವ ಸಾಧನೆಯನ್ನು ಮಾಡಿದ್ದರು. ಬಳಿಕ ಅವರು ಭಡ್ತಿ ಹೊಂದಿ ಕೊಯಮತ್ತೂರು ವಿಮಾನ ನಿಲ್ದಾಣಕ್ಕೆ ವರ್ಗಾವಣೆಗೊಂಡಿದ್ದರು. ಇವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾಗಿದ್ದಾರೆ. 2008ರಲ್ಲಿ ಸಭೆಯು ಸಂಭ್ರಮದಿಂದ ಆಚರಿಸಿದ ಶತಮಾನೋತ್ಸವ ಸಂದರ್ಭದಲ್ಲಿ ಇವರು ಶತಮಾನೋತ್ಸವ ಸಮಿತಿಯ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿದ್ದರು.

## ಕಾಪು ಮಜೂರು ಗ್ರಾಮ ಪಂಚಾಯತ್ ಸದಸ್ಯರಾಗಿ ಶ್ರೀ ಕೆ. ವಾಸುದೇವರಾವ್



ಕರಂದಾಡಿಯ ವಾಸುದೇವರಾವ್ ಇವರು ಕಾಪು ಮಜೂರು ಗ್ರಾಮ ಪಂಚಾಯತ್ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ. ಇವರು ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇದರ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀ ಶಾರದಾ ಮಂಟಪದ ಯುವ ವೇದಿಕೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ ಮತ್ತು ಅನೇಕ ಸಮಾಜ ಹಿತ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ. ಇವರು ಉಡುಪಿಯ 'ದೀಪಿಕಾ ಸ್ಟುಡಿಯೋ' ಇದರ ಮಾಲೀಕರಾಗಿದ್ದಾರೆ.

ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ(ರಿ.)ದ ಆಶ್ರಯದಲ್ಲಿ

### ಸೌರ ಋಗುಪಾಕರ್ಮವು

**ತಾ.23-08-2010ರಂದು ಸೋಮವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.**

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

– ಕಾರ್ಯದರ್ಶಿ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ

ಮಹಿಳಾ ವೇದಿಕೆ

### ವರಮಹಾಲಕ್ಷ್ಮೀ ವ್ರತ

ಉಡುಪಿ ಕುಂಜಿಬೆಟ್ಟು ಶ್ರೀ ಶಾರದಾ ದೇವಸ್ಥಾನದಲ್ಲಿ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಆಚರಣೆಯು ತಾ.20-08-2010 ರಂದು ಶುಕ್ರವಾರ ಸಾಯಂಕಾಲ 4-30 ಗಂಟೆಗೆ ನೆರವೇರಲಿದೆ. ಭಾಗವಹಿಸುವ ಭಕ್ತ ಬಾಂಧವರು ಫಲಪುಷ್ಪ, ತುಳಸಿ, ವೀಳ್ಯ, ಕುಂಕುಮ, ಅರಸಿನ, ಸಣ್ಣ ಕಾಲುದೀಪ ಮೊದಲಾದ ಸಾಮಾಗ್ರಿಗಳೊಂದಿಗೆ (ಸಾಧ್ಯವಿದ್ದವರು ಮಧ್ಯಾಹ್ನ ಉಪವಾಸವಿದ್ದು) ಸಮಯಕ್ಕೆ ಸರಿಯಾಗಿ ಶ್ರೀ ಶಾರದಾ ಮಂಟಪಕ್ಕೆ ಆಗಮಿಸಿ ಸಹಕರಿಸಬೇಕೆಂದೂ, ಹಾಗೆಯೇ ಅಂದು ಸಂಜೆ ಶ್ರೀ ದೇವಸ್ಥಾನದಲ್ಲಿ ನಡೆಯುವ ಸಾಮೂಹಿಕ ಹೂವಿನ ಪೂಜಾ ಕಾರ್ಯಕ್ರಮದಲ್ಲಿಯೂ ಪಾಲ್ಗೊಳ್ಳಬೇಕೆಂದೂ ಸಂಘದ ಮಹಿಳಾ ವೇದಿಕೆಯ ಅಧ್ಯಕ್ಷರು ಮತ್ತು ಸಂಚಾಲಕರು ವಿನಂತಿಸಿದ್ದಾರೆ.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್
ಎಚ್.ಎನ್. ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ
ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.
-ಸಂ.

## ಚಿಂತನ

ನೌಕರನೊಬ್ಬ ತನ್ನ ಕೌಟುಂಬಿಕ ತೊಂದರೆಯಿಂದ ಆಗಾಗ ಆರ್ಥಿಕ ಮುಗ್ಗಟ್ಟಿಗೆ ಒಳಗಾಗುತ್ತಿದ್ದ. ಹಾಗೆಯೇ ಅಂತಹ ಸಂದರ್ಭದಲ್ಲಿ ತನ್ನ ಮೇಲಧಿಕಾರಿಯೊಬ್ಬರನ್ನು ಕೇಳಿ ಕೈಸಾಲ ಪಡೆದುಕೊಳ್ಳುತ್ತಿದ್ದ. ಹಾಗೆಯೇ ತಿಂಗಳ ಸಂಬಳ ಬಂದಾಗ ಅದನ್ನು ನಿಯಮಿತವಾಗಿ ಹಿಂದಕ್ಕೆ ಸಲ್ಲಿಸುತ್ತಿದ್ದ.

ಇದು ಅನೇಕ ಸಂದರ್ಭದಲ್ಲಿ ಪುನರಾವರ್ತಿತವಾದಾಗ ಸಾಲ ಕೊಟ್ಟ ಮೇಲಧಿಕಾರಿಯು ತನ್ನ ನಿಲುವನ್ನು ಹೀಗೆಂದು ಪ್ರಕಟಪಡಿಸಿದ - "ನೋಡಯ್ಯ ನನ್ನ ಕೈಯಲ್ಲಿ ಸದ್ಯಕ್ಕೆ ಹಣ ಇಲ್ಲ; ನನಗೆ ತಿಳಿದವರೊಬ್ಬರು ಬಡ್ಡಿಗೆ ದುಡ್ಡು ಕೊಡುತ್ತಾರೆ. ಅವರಿಂದ ನನಗೆ ಬೇಕೆಂದು ಕೇಳಿ ಸಾಲ ತೆಗೆಸಿಕೊಡುತ್ತೇನೆ. ನೀನು ತಪ್ಪದೆ ಬಡ್ಡಿ-ಅಸಲು ಪ್ರತಿ ತಿಂಗಳೂ ಕೊಡಬೇಕು ಎಂದು ಹೇಳಿದರು. ಹೇಳಿದಂತೆ ಸಾಲ ತೆಗೆಸಿಯೂ ಕೊಟ್ಟರು. ಸಾಲಿಗನಾದ ನೌಕರ ನಿಯತ್ತಿನಿಂದ ಸಾಲ ತೀರಿಸಿದ್ದೂ ಆಯಿತು.

ಆದರೆ ಆ ನೌಕರ ದೊಡ್ಡ ಪಾಠವೊಂದನ್ನು ಕಲಿತನು. ಸಾಲ ಕೊಡುವವರು ಸುಮ್ಮನೆ ಕೈಸಾಲ ಕೊಡುವುದಿಲ್ಲ, ಬಡ್ಡಿಯ ಜೊತೆಗೇ ಸಾಲ ನೀಡುತ್ತಾರೆ ಎಂದು. ಇದು ಆತನ ಜೀವನ ಪರಿವರ್ತನೆಗೆ ಮೂಲ ಕಾರಣವಾಯಿತು. ಅಲ್ಲದೆ ಅವನು ಬಡ್ಡಿಗೆ ಸಾಲ ತೆಗೆಯುವ ಅಭ್ಯಾಸವನ್ನೆ ಬಿಟ್ಟುಬಿಟ್ಟ, ಅಲ್ಲದೆ ಹಲವು ವರ್ಷಗಳ ಪರಿಶ್ರಮದದ ನಂತರ ತಾನೇ ಒಂದು ಫೈನಾನ್ಸ್ ಕಂಪನಿಯ ಮಾಲೀಕನಾಗಿ ಅವನೇ ಹಲವಾರು ಮಂದಿಗೆ ಸಾವಿರಾರು ರೂಪಾಯಿ ಸಾಲ ನೀಡಿ, ಬಡ್ಡಿಯನ್ನೂ, ಅಸಲನ್ನೂ ವಸೂಲಾತಿ ಮಾಡಿದ. ಕೆಲವೇ ವರ್ಷಗಳಲ್ಲಿ ಅವನು ಸ್ಥಿತಿವಂತನಾದ.

ಹೀಗೆ ಕೆಲವೊಂದು ಸಂದರ್ಭಗಳು ನಮ್ಮ ಜೀವನಕ್ಕೆ ದೊಡ್ಡ ಪಾಠಗಳಾಗುತ್ತವೆ ಎಂದರೆ ತಪ್ಪಲ್ಲ, ಅಲ್ಲವೇ?

# ಶ್ರೀ ಕೃಷ್ಣಾಯನ
## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಒಂದು ದಿನ ಶ್ರೀಕೃಷ್ಣನು ಗೊಲ್ಲರೊಡನೆ ಗೋವುಗಳನ್ನು ಮೇಯಿಸಿ ಹಟ್ಟಿಯ ಕಡೆಗೆ ಅವುಗಳನ್ನು ಅಟ್ಟಿಕೊಂಡು ಬರುತ್ತಿದ್ದನು. ಆಗ ಅರಿಷ್ಟನೆಂಬೊಬ್ಬ ಅಸುರನು ಒಂದು ಮಹಾಕಾಯದ ಗೂಳಿಯ ರೂಪತಾಳಿ ಗೊರಸುಗಳಿಂದ ನೆಲವನ್ನು ಕೆದಕುತ್ತ ಬಂದನು. ಭಯಂಕರವಾಗಿ ಗುಟುರು ಹಾಕುತ್ತಿದ್ದನು. ಅವನೆಬ್ಬಿಸಿದ ಧೂಳು ಎಲ್ಲ ಕಡೆ ದಟ್ಟವಾಗಿ ಹಬ್ಬಿತ್ತು. ಆಗಾಗ ಮೂತ್ರ ವಿಸರ್ಜನೆ ಮಾಡುತ್ತಿದ್ದನು. ಸೆಗಣಿಯನ್ನು ಹಾಕುತ್ತಿದ್ದನು. ಅವನಿಗೆ ಚೂಪಾದ ಮತ್ತು ಬಲವಾದ ಕೋಡುಗಳಿದ್ದವು. ಈ ಅದ್ಭುತ ಭೀಕರವಾದ ಗೂಳಿಯನ್ನು ನೋಡಿ ಗೊಲ್ಲತಿಯರು, ಗೊಲ್ಲರು ಭಯದಿಂದ ನಡುಗಿದರು. ದನಕರುಗಳೂ ಹೆದರಿ ಕಂಗಾಲಾದವು. ಹಾಗೇ ದಿಕ್ಕಾಪಾಲಾಗಿ ಓಡಿದವು. ಹೆದರಿದ ವೃಂದಾವನ ವಾಸಿಗಳು ಶ್ರೀಕೃಷ್ಣನಿಗೆ ಶರಣು ಹೋದರು. ಅವನು ಅವರಿಗೆ 'ಹೆದರಬೇಡಿ' ಎಂದು ಹೇಳುತ್ತ ಧೈರ್ಯ ತುಂಬಿದನು. ಅವನನ್ನು ಆಕ್ರಮಿಸಲು ಬರುತ್ತಿದ್ದ ವೃಷಭಾಸುರನಿಗೆ ಅವನೆಂದನು, "ಎಲೋ ದುಷ್ಟ, ನೀನೀ ಗೋವುಗಳನ್ನು, ಗೊಲ್ಲರನ್ನು ಹೆದರಿಸುವುದರಿಂದ ನಿನಗೇನು ಲಾಭ? ನಿನ್ನಂತಹ ದುರಾತ್ಮರ ದರ್ಪವನ್ನು ಮುರಿಯುವವನು ನಾನು". ಹೀಗೆ ಹೇಳಿ ಶ್ರೀಕೃಷ್ಣನು ಚಪ್ಪಾಳೆ ತಟ್ಟಿ ತನ್ನ ಸಂಗಡಿಗನ ಹೆಗಲ ಮೇಲೆ ಕೈಯನ್ನಿಟ್ಟು ಅವನ ಮುಂದೆ ನಿಂತುಕೊಂಡನು. ಬಾಲ ಮುರಲೀಧರನ ಉದ್ಧಟತನವನ್ನು ಕಂಡು ವೃಷಾಸುರನ ಕೋಪ ನೆತ್ತಿಗೇರಿತು. ಅವನು ಮತ್ತೂ ಭೀಷಣವಾಗಿ ಗುಟುರು ಹಾಕುತ್ತಾ, ನೆಲವನ್ನು ಕೆರೆಯುತ್ತಾ ತಲೆಯನ್ನು ಬಗ್ಗಿಸಿಕೊಂಡು ಕೊಂಬುಗಳಿಂದ ಕೃಷ್ಣನನ್ನು ತಿವಿಯಲು ಓಡಿ ಬಂದನು. ಭಗವಂತನು ಅವನು ಕೊಂಬುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಹದಿನೆಂಟು ಹೆಜ್ಜೆಗಳಷ್ಟು ದೂರ ಅವನನ್ನು ಹಿಂದಕ್ಕೆ ತಳ್ಳಿದನು. ಇದರಿಂದ ಅವನು ಕೆಳಕ್ಕೆ ಬಿದ್ದನು. ಪುನಃ ಅವನು ಮೇಲೆದ್ದು ಗೋವಿಂದನ ಮೇಲೆ ಆಕ್ರಮಣ ಮಾಡಿದನು. ಈಗಲೂ ಪರಮಾತ್ಮನು ಅವನು ಕೋಡುಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ಒದೆದನು. ಅಸುರನು ನೆಲಕ್ಕುರುಳಿದನು. ಕೂಡಲೆ ಮಾಧವನು ಅವನ ಕೋಡುಗಳನ್ನು ಒದ್ದೆ ಬಟ್ಟೆಯನ್ನು ಹಿಂಡುವಂತೆ ಹಿಂಡಿದನು. ಆ ಮದೋನ್ಮತ್ತ ರಕ್ಕಸನು ಮೂತ್ರ, ಸೆಗಣಿಗಳನ್ನು ವಿಸರ್ಜಿಸಿ ರಕ್ತಕಾರುತ್ತ ಸತ್ತೇ ಹೋದನು. ಗೊಲ್ಲರ ಸಮೂಹ ಹೊಗಳುತ್ತಿರುವಂತೆ ಶ್ರೀಕೃಷ್ಣನು ಬಲಭದ್ರ ಸಹಿತ ವೃಂದಾವನ ಹೊಕ್ಕನು.

೭

ಇತ್ತ ನಾರದರು ಕಂಸನ ಬಳಿಗೆ ಹೋಗಿ ಹೇಳಿದರು, "ಕಂಸ, ದೇವಕಿಯ ಏಳನೆಯ ಗರ್ಭದಲ್ಲಿದ್ದ ಗಂಡು ಮಗುವನ್ನು ಕೊಂಡುಹೋಗಿ ರೋಹಿಣಿಯ ಗರ್ಭದಲ್ಲಿಟ್ಟ ಯೋಗಮಾಯೆಯೇ ಯಶೋದೆಯ ಮಗಳಾಗಿ ಹುಟ್ಟಿದಳು. ದೇವಕಿಯ ಎಂಟನೆಯ ಮಗನಾಗಿ ಹುಟ್ಟಿದ್ದು ಕೃಷ್ಣನೇ. ಅವನು ಹುಟ್ಟಿದ ಕೂಡಲೆ ನಿನಗೆ ಹೆದರಿ ಅವನನ್ನು ಯಶೋದೆಯ ಹತ್ತಿರ ಕೊಂಡು ಹೋದವನು ವಸುದೇವನೇ. ಅವನೇ ಅಲ್ಲಿ ಹುಟ್ಟಿದ್ದ ಹೆಣ್ಣು ಶಿಶುವನ್ನು ಇಲ್ಲಿಗೆ ತಂದದ್ದು. ಆದೇನಾಯಿತೆಂಬುದು ನಿನಗೆ ತಿಳಿದೇ ಇದೆ. ರೋಹಿಣಿಯ ಮಗನಾದ ಬಲರಾಮನೂ, ಯಶೋದೆಯ ಮಗನೆಂದು ಬಳೆದ ಕೃಷ್ಣನೂ ನಿನ್ನ ಅನುಯಾಯಿಗಳನ್ನೆಲ್ಲ ಸಂಹರಿಸಿದ್ದಾರೆ".

ಇದನ್ನು ಕೇಳಿದ ಕಂಸನ ಪಿತ್ತ ನೆತ್ತಿಗೇರಿತು. ಕೂಡಲೇ ಅವನು ಖಡ್ಗವನ್ನೆತ್ತಿಕೊಂಡು ವಸುದೇವನ ತಲೆಯನ್ನುರುಳಿಸಲು ಮುಂದಾದನು. ಆಗ ನಾರದರು, "ರಾಜ, ಇದೇನಿದು? ನಿನಗೆ ಅಪಾಯವಿರುವುದು ಕೃಷ್ಣನಿಂದ. ಇವನನ್ನು ಕೊಲ್ಲುವುದರಿಂದ ಏನು ಲಾಭ? ಬಿಡು ಇವನನ್ನು" ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಕಂಸನು ವಸುದೇವ-ದೇವಕಿಯನ್ನು ಸಂಕೋಲೆಯಿಂದ ಕಟ್ಟಿ ಹಾಕಿಸಿ ಬಂಧನಕ್ಕೆ ತಳ್ಳಿದನು. ಕಂಸನು ತನ್ನ ಅನುಚರನಾದ ಕೇಶಿ ಎಂಬ ರಾಕ್ಷಸನಿಗೆ ಆಜ್ಞಾಪಿಸಿದನು, "ನೀನಿಗಲೇ ವೃಂದಾವನಕ್ಕೆ ಹೋಗಿ ನನ್ನ ಶತ್ರುಗಳಾದ ಬಲರಾಮ, ಕೃಷ್ಣರನ್ನು ಕೊಂದು ಬಾ". ಕೇಶಿ ರಾಕ್ಷಸನು ತಕ್ಷಣ ಗೋಕುಲಕ್ಕೆ ಧಾವಿಸಿದನು. ಈ ಕಡೆ ಕಂಸನು ಮುಷ್ಟಿಕ, ಚಾಣೂರ, ಶಲ, ತೋಶಲಕ ಮುಂತಾದ ಮಲ್ಲರನ್ನೂ, ಮಂತ್ರಿಗಳನ್ನೂ, ಮಾವಟಿಗರನ್ನೂ ಕರೆದು ಹೇಳಿದನು, "ವೀರರೇ ಮತ್ತು ಮೇಧಾವಿಗಳೇ, ಆನಕದುಂದುಭಿಯ ಮಕ್ಕಳಾದ ಬಲರಾಮ, ಕೃಷ್ಣರು ವ್ರಜದಲ್ಲಿದ್ದಾರೆ. ಅವರು ನನ್ನ ಕಡು ಶತ್ರುಗಳು. ಅವರನ್ನು ಇಲ್ಲವಾಗಿಸಲು ಕೇಶಿಯನ್ನು ಕಳುಹಿಸಿದ್ದೇನೆ. ಅವನೀಕಾರ್ಯದಲ್ಲಿ ಯಶಸ್ವಿಯಾಗುತ್ತಾನೋ ಇಲ್ಲವೋ ತಿಳಿಯದು. ಅವನು ಸೋತರೆ ಅವರನ್ನು ಇಲ್ಲಿಗೆ ಕರೆಸುತ್ತೇನೆ. ಅವರು ಇಲ್ಲಿಗೆ ಬಂದಾಗ ಅವರನ್ನು ಮಲ್ಲರಾದ ನೀವು ಮಲ್ಲಯುದ್ಧದಲ್ಲಿ ಮುಗಿಸಿಬಿಡಬೇಕು. ಅದಕ್ಕಾಗಿ ಮಲ್ಲರಂಗವನ್ನು ನಿರ್ಮಿಸಿರಿ. ನಾಗರಿಕರೂ, ಜಾನಪದರೂ ಸ್ವೇಚ್ಛೆಯಿಂದ ಬಂದು ಮಲ್ಲಯುದ್ಧವನ್ನು ನೋಡಲಿ.

ಮಹಾಮಾತ್ರ (ಮಾವಟಿಗ)ನೇ, ನೀನು ಮಲ್ಲಭೂಮಿಯ ಬಾಗಿಲಲ್ಲೇ ನಮ್ಮ ಗಜರಾಜನಾದ ಕುವಲಯಾಪೀಡನನ್ನು ನಿಲ್ಲಿಸಿರು. ಆ ನನ್ನ ಶತ್ರುಗಳು ಬರುವಾಗ ಆನೆಯಿಂದ ಅವರನ್ನು ಕೊಲ್ಲಿಸು. ಬರುವ ಚತುರ್ದಶಿಯಂದು ಧನುರ್ಯಾಗ (ಬಿಲ್ಲುಹಬ್ಬ)ಕ್ಕೆ ಏರ್ಪಾಡು ಮಾಡಿರಿ. ಅದಕ್ಕಾಗಿ ರುದ್ರದೇವರಿಗೆ ಬಲಿಯನ್ನ ರ್ಪಿಸಬೇಕು". ಇಷ್ಟು ಹೇಳಿದ ಕಂಸನು ಅವರನ್ನು ಕಳುಹಿಸಿಕೊಟ್ಟು ಯದುಶ್ರೇಷ್ಠನಾದ ಅಕ್ರೂರನನ್ನು ಬರಮಾಡಿಕೊಂಡು ಅವನ ಕೈಹಿಡಿದುಕೊಂಡು ಇಂತೆಂದನು, "ಮಹಾದಾನಿಯಾದ ಅಕ್ರೂರನೇ, ನೀನು ನನಗೊಂದು ಉಪಕಾರ ಮಾಡಬೇಕು. ಭೋಜವಂಶೀಯರಲ್ಲಿ ಮತ್ತು ಯದುವಂಶೀಯರಲ್ಲಿ ನನಗೆ ನಿನ್ನಂತಹ ಹಿತೈಷಿಗಳಿಲ್ಲ. ನೀನು ವ್ರಜಭೂಮಿಗೆ ಹೋಗಿ ಅಲ್ಲಿರುವ ವಸುದೇವನ ಮಕ್ಕಳಾದ ಬಲರಾಮ, ಕೃಷ್ಣರನ್ನು ಇಲ್ಲಿಗೆ ಕರೆದುಕೊಂಡು ಬಾ. ಅವರ ಜೊತೆಯಲ್ಲಿ ನಂದಾದಿ ಗೋಪಾಲರೂ ಬರಲಿ. ಆ ಹುಡುಗರು ನನಗೆ ಮೃತ್ಯುಪ್ರಾಯರು ತಾನೆ? ರೋಗವನ್ನೂ, ಶತ್ರುವನ್ನೂ ಉಪೇಕ್ಷಿಸಬಾರದೆಂಬ ನೀತಿ ನಿನಗೆ ತಿಳಿದೇ ಇದೆ. ಅವರು ಬರುತ್ತಲೇ ನನ್ನ ಆನೆಯಿಂದ ಅವರನ್ನು ಕೊಲ್ಲಿಸುತ್ತೇನೆ. ಅಕಸ್ಮಾತ್ ಆದಾಗದಿದ್ದರೆ ನಮ್ಮ ಮಲ್ಲರು ಅವರಿಗೆ ಯಮಪಟ್ಟಣದ ದಾರಿ ತೋರಿಸುತ್ತಾರೆ. ಅನಂತರ ವಸುದೇವಾದಿಗಳಿಗೆ ನಾನೊಂದು ಗತಿಯನ್ನು ಕಾಣಿಸುತ್ತೇನೆ. ನನ್ನ ಮುದಿ ಅಪ್ಪನಿಗೂ ಅದೇ ಗತಿಯೆಂದಿಟ್ಟುಕೋ. ಇಷ್ಟಾದರೆ ನನ್ನ ಜೀವನ ನಿಷ್ಕಂಟಕವಾಗುತ್ತದೆ. ನನ್ನ ಗುರುವೂ, ಮಾವಯ್ಯನೂ ಆದ ಜರಾಸಂಧ ಮತ್ತು ವಾನರ ಮಿತ್ರ ದ್ವಿವಿದ, ಶಂಬರ, ನರಕ, ಬಾಣ ಮುಂತಾದ ಅಸುರ ಮಿತ್ರರ ಸಹಾಯದಿಂದ ದೇವತೆಗಳನ್ನೆಲ್ಲ ಸಾಯಿಸಿ ಸುಖವಾಗಿ ರಾಜ್ಯವಾಳುತ್ತಿರುತ್ತೇನೆ". ಅಕ್ರೂರನು ಕಂಸನ ಆಜ್ಞೆಯಂತೆ ವ್ರಜಭೂಮಿಗೆ ತೆರಳುವ ಸಿದ್ಧತೆ ಮಾಡಿಕೊಳ್ಳಲು ತನ್ನ ಮನೆಗೆ ಹೋದನು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**
**ಅಂಬಿತಮೆ ನದೀತಮೆ ದೇವೀತಮೆ ಸರಸ್ವತಿ**
**ಅಪ್ರಶಸ್ತಾ ಇವ ಸ್ಮಸಿ ಪ್ರಶಸ್ತಿಮಂಬ ನಸ್ಕೃಧಿ ॥**

ಅಂದರೆ ಓ ಸರಸ್ವತಿ, ಮಾತೃಸ್ವರೂಪಿಯೇ, ಮಹಾನದಿಯೇ, ಮಹಾದೇವಿಯೇ ನಾವು ಅಪ್ರಸಿದ್ಧರಂತೆ ಇದ್ದೇವೆ. ನಮಗೆ ಸ್ವ-ಅಭಿವ್ಯಕ್ತಿಯನ್ನು ನೀಡುವಂಥವಳಾಗು.

**ಪುಸ್ತಕ ಪರಿಚಯ :**
"ಸೃಷ್ಟಿ" (ಕವನಗಳು)
*ಲೇಖಕರು :* ಎಂ. ವ್ಯಾಸ
*ಪ್ರಕಾಶಕರು :*
ಅಜಂತ ಪ್ರಕಾಶನ, ಕೃಪಾನಿಧಿ,
ರಾಮದಾಸನಗರ, ಕಾಸರಗೋಡು.
*ಬೆಲೆ :* ರೂ.80/-

........ ನನ್ನ ಖಾಸಗೀ ಒತ್ತಡದ ಬಿಡುಗಡೆಗಾಗಿ ನಾನು ಬರೆಯುತ್ತೇನೆ. ಅದರ ಉಪಯೋಗ ನನಗೆ ಮಾತ್ರ ಇದೆ. ಅದರಲ್ಲಿ ನನ್ನ ಗತ ಹೆಜ್ಜೆಗಳನ್ನು ಬಿಟ್ಟಿರುತ್ತೇನೆ. ಅದು ನನ್ನ ಇತಿಹಾಸವಾಗಿದೆ. ಮನಸ್ಸು ಎಂದೂ ನಿವೃತ್ತಿ ಬಯಸುವುದಿಲ್ಲ. ನನ್ನಂತಿರುವ ಮನಸ್ಸುಗಳು, ನನ್ನ ಅರ್ಥಮಾಡಿಕೊಳ್ಳುತ್ತವೆ ಎಂಬ ನಂಬಿಕೆಯಿಂದ, ನನ್ನ ಧ್ವನಿಗಳನ್ನು ಶಬ್ದಗಳ ಮೂಲಕ ಬಿಡುಗಡೆಗೊಳಿಸುತ್ತೇನೆ. ಇಡೀ ಓದುಗ ಜಗತ್ತನ್ನು ಬೆಚ್ಚಿ ಬೀಳಿಸುವುದು ನನ್ನ ಉದ್ದೇಶ ಖಂಡಿತಾ ಅಲ್ಲ; ಮತ್ತು ಕಾವ್ಯಕ್ಕೆ ಒಂದು ಉದ್ದೇಶ ಇರಬೇಕೆಂದು ನಾನು ಭಾವಿಸುವುದೂ ಇಲ್ಲ. ಏಕಾಂಗಿ ಮನಸ್ಸು-ಒಂಟಿ ಮನಸ್ಸಿಗೂ ಹಾಡುಗಳಿವೆ. ಹಾಡು ಹಕ್ಕಿಯ ಕೂಗುಗಳಂತೆ ನನ್ನ ಶಬ್ದಗಳಲ್ಲಿ ಮೋಡಿ ಇಲ್ಲ. ಅವು ದುರಂತದ ಧ್ವನಿಗಳು"
-ಎಂ.ವ್ಯಾಸ (ಕೃಪೆ : ಶಬ್ದಗುಣ)

"ಕೊನೆಗೂ ವ್ಯಾಸರ ಕತೆ, ಕವಿತೆಗಳ ಬಗ್ಗೆ ಒಟ್ಟಾಗಿ ಏನು ಹೇಳಬಹುದು. ನನ್ನ ದೃಷ್ಟಿಯಲ್ಲಿ ಅವರದು ಕಪ್ಪು ದರ್ಶನದ ಕಾವ್ಯ. ಕತ್ತಲ ಒಡಲಲ್ಲಿ ಸಂಚರಿಸಿ, ಅದನ್ನು ಸ್ಫೋಟಗೊಳಿಸುವ ಕಾವ್ಯ. ಉಳಿದವರಿಗಿಂತ ಭಿನ್ನವಾಗಿ ಹೊಸದೇ ಜಗತ್ತನ್ನು ತೋರಿಸುವ ಕಾವ್ಯ! ಈ ದೃಷ್ಟಿಯಿಂದ ವ್ಯಾಸರಿಗೆ ವ್ಯಾಸರೇ ಸಾಟಿ. ಅವರಂತೆ ನೋವುಂಡ, ಆ ನೋವನ್ನೆಲ್ಲ ಬರವಣಿಗೆಗೆ ಇಳಿಸಿದ ಇನ್ನೊಬ್ಬ ಬರೆಹಗಾರ ಇಲ್ಲ ಎಂದೇ ಹೇಳಬೇಕು. ತನ್ನ ಕಾಲದ ಎಲ್ಲ ಮಾದರಿಗಳನ್ನು ತಿರಸ್ಕರಿಸಿ, ತನ್ನ ಭಾವನೆಗಳಿಗಷ್ಟೇ ನಿಷ್ಠರಾಗಿ ಬರೆದ, ಬದುಕಿದ ವ್ಯಾಸರು ಇಂದು ಕೇವಲ ನೆನಪು ಮಾತ್ರ. ಆದರೆ ಅವರು ತಮ್ಮ ಕೃತಿಗಳ ಮೂಲಕವಾಗಿ ಸದಾ ನಮ್ಮೊಂದಿಗಿರುತ್ತಾರೆ. ಹೀಗೆ ಸದಾ ನಮ್ಮೊಂದಿಗಿರುವ ವ್ಯಾಸರಿಗೆ ನನ್ನ ಪ್ರೀತಿ, ಗೌರವಪೂರ್ವಕವಾದ ನಮನಗಳು" ಎಂದು 'ಸೃಷ್ಟಿ' ಕೃತಿಯ ಮುನ್ನುಡಿಯಲ್ಲಿ ಸುಬ್ರಾಯ ಚೊಕ್ಕಾಡಿಯವರು ತಿಳಿಸುತ್ತಾರೆ.

"ವ್ಯಾಸರ ಅಗಲಿಕೆಯಿಂದುಂಟಾದ ಶೂನ್ಯವನ್ನು ಅವರ ಕೃತಿಗಳ ಸಂಕಲನಗಳನ್ನು ತರುವ ಮೂಲಕ ತುಂಬಲು ಪ್ರಯತ್ನಿಸುತ್ತಿರುವ ನಮಗೆ ವಿವಿಧ ಪ್ರಕಾಶಕರು ನೆರವು ನೀಡುತ್ತಾ ಬಂದರು. ಕಳೆದ ಎರಡು ವರ್ಷಗಳಲ್ಲಿ ತಪ್ತ, ಅಸ್ತ್ರ, ಕೆಂಡ, ಕಾಂತ ಎಂಬ ನಾಲ್ಕು ಕಥಾ ಸಂಕಲನಗಳೂ ಮೌನಗರ್ಭ ಎಂಬ ಲೇಖನ ಸಂಕಲನವೂ ಪ್ರಕಟವಾದುವು. ಇದೀಗ "ಸೃಷ್ಟಿ" ಮತ್ತು "ಕೃತ" (ದ್ವಿತೀಯ ಮುದ್ರಣ) ಹೊರಬರುತ್ತಿದೆ. ವ್ಯಾಸರ ಪತ್ನಿ ಶ್ರೀಮತಿ ಶಶಿಕಲಾ, ಮಕ್ಕಳಾದ ಡಾ। ತೇಜಸ್ವಿ, ಕೃಪಾ, ಪ್ರತಿಮಾ ಮತ್ತು ಮನೆಯವರು ಈ ಯೋಜನೆಗೆ ಪೂರಕವಾಗಿ ಸ್ಪಂದಿಸಿದರು. ವ್ಯಾಸರ ಸಾಹಿತ್ಯ ಇನ್ನೂ ಇದೆ" ಎಂದು ಡಾ। ವರದರಾಜ ಚಂದ್ರಗಿರಿಯವರು ಈ ಕೃತಿಯಲ್ಲಿ 'ಎರಡು ಮಾತು' ಎಂಬಲ್ಲಿ ಹೇಳುತ್ತಾರೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್.

# ಜ್ಞಾನ, ಕೌಶಲ್ಯವೃದ್ಧಿಯಿಂದ ಯಶಸ್ಸು: ಇನ್ನ ಚಂದ್ರಕಾಂತ ರಾವ್




"ಜ್ಞಾನ, ಕೌಶಲ್ಯವೃದ್ಧಿಯಿಂದ ವಿದ್ಯಾರ್ಥಿಯ ಮನೋಭಾವ ರೂಪುಗೊಳ್ಳುತ್ತದೆ. ಇದರೊಂದಿಗೆ ಸ್ಪಷ್ಟವಾದ ಗುರಿ ಸೇರಿಕೊಂಡರೆ ಯಶಸ್ಸು ಖಚಿತ" ಎಂದು ಸಿಂಗಾಪುರದ ಸ್ವಿಸ್ ಓವರ್‌ಸೀಸ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇನ್ನ ಚಂದ್ರಕಾಂತ ರಾವ್ ಹೇಳಿದರು. ಅವನು ಇನ್ನದ ಅದ್ವೈತ ಭಾರತೀಯ ಕಮ್ಯುನಿಟಿ ಡೆವೆಲಪ್‌ಮೆಂಟ್ ಮತ್ತು ಎಜುಕೇಶನ್ ಟ್ರಸ್ಟ್ ಮತ್ತು ಬೆಳ್ಮಣ್ ಜೇಸೀಸ್ ಚೆರಿಟೇಬಲ್ ಟ್ರಸ್ಟ್ ಇವುಗಳ ಸಹಭಾಗಿತ್ವದಲ್ಲಿ ಮೇ 29ರಂದು ಇನ್ನ, ಬೆಳ್ಮಣ್ಣು ಮತ್ತು ಫಲಿಮಾರುಗಳಲ್ಲಿ ವಿದ್ಯಾರ್ಥಿಗಳಿಗಾಗಿ ನಡೆದ 20 ದಿನಗಳ ಉಚಿತ ಸ್ಪೋಕನ್ ಇಂಗ್ಲೀಷ್ ಕೋರ್ಸ್‌ನ ಸಮಾರೋಪ ಸಮಾರಂಭ ಮತ್ತು ಪುಸ್ತಕ ವಿತರಣಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು. 300ಕ್ಕೂ ಹೆಚ್ಚು ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳು ಈ ಶಿಬಿರದ ಪ್ರಯೋಜನ ಪಡೆದರು. ಈ 300 ವಿದ್ಯಾರ್ಥಿಗಳಿಗೆ ಬೆಂಗಳೂರಿನ ಉದ್ಯಮಿ ಡಾ| ದಯಾನಂದ ಎಸ್.ರಾವ್ ಮತ್ತು ಎಬಿಸಿಡಿ ಆ್ಯಂಡ್ ಇ ಟ್ರಸ್ಟ್ ಅವರು ಕೊಡುಗೆಯಾಗಿ ನೀಡಿದ ರೂ.50,000/- ವೆಚ್ಚದ ನೋಟ್ಸ್ ಪುಸ್ತಕಗಳನ್ನು ಇದೇ ಸಂದರ್ಭದಲ್ಲಿ ಟ್ರಸ್ಟ್‌ನ ಅಧ್ಯಕ್ಷೆ ಶ್ರೀಮತಿ ವಿಮಲಾ ದಿನೇಶ ರಾವ್ ಅವರು ವಿತರಿಸಿದರು. ಸ್ಪೋಕನ್ ಇಂಗ್ಲೀಷ್ ಕೋರ್ಸ್‌ನ ಸಂಪನ್ಮೂಲ ವ್ಯಕ್ತಿಗಳಾದ ಎಂ.ಸುಂದರ ರಾವ್, ಶ್ರೀ ರಾಜೇಂದ್ರ ಭಟ್, ಶ್ರೀ ಗುಣಕರ ಶೆಟ್ಟಿ, ಶ್ರೀ ಭಾಸ್ಕರ ಆಚಾರ್, ಶ್ರೀ ಶಂಕರ ನಾರಾಯಣ ರಾವ್, ಶ್ರೀಮತಿ ಅರುಣಾ ಪೂಂಜಾ ಅವರನ್ನು ಅಭಿನಂದಿಸಿ ಗೌರವಿಸಲಾಯಿತು. ಜೇಸೀಸ್ ವಲಯ ಉಪಾಧ್ಯಕ್ಷ ಎನ್.ಜಿ.ಸುಕುಮಾರ್, ವಲಯದ ಪ್ರಥಮ ಮಹಿಳೆ ಶ್ರೀಮತಿ ರೇಶ್ಮಾ ಉದಯ ಶೆಟ್ಟಿ, ಇನ್ನ ಎಂ.ವಿ. ಶಾಸ್ತ್ರೀ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಪ್ರಕಾಶ್ ರಾವ್ ಪಿ.ಎನ್. ಮುಖ್ಯಅತಿಥಿಯಾಗಿದ್ದರು. ಬೆಳ್ಮಣ್ ಜೇಸೀಸ್‌ನ ಅಧ್ಯಕ್ಷ ಸುಧಾಕರ ಆಚಾರ್ಯ ಅಧ್ಯಕ್ಷತೆ ವಹಿಸಿ ಸ್ವಾಗತಿಸಿದರು. ಎನ್. ಸುಧಾಕರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜೇಂದ್ರ ಭಟ್ ಕೆ. ಅಭಿನಂದನಾ ಭಾಷಣ ಮಾಡಿದರು. ಜೇಸೀಸ್ ಚೆರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಜಯಂತರಾವ್ ಪಿ. ಮತ್ತು ಎಬಿಸಿಡಿ ಆ್ಯಂಡ್ ಇ ಟ್ರಸ್ಟ್‌ನ ಕೋಶಾಧಿಕಾರಿ ವೇದಾವತಿ ಎಲ್.ರಾವ್ ಟ್ರಸ್ಟ್‌ನ ಕಾರ್ಯಯೋಜನೆಗಳನ್ನು ಸಭೆಯ ಮುಂದಿಟ್ಟರು.

# ಉತ್ತಮ ಚಿತ್ರಕಲಾವಿದೆ - ಡಾ| ಗುಣಸಾಗರಿ ರಾವ್


- ಕೆ.ದಿನಮಣಿ ಶಾಸ್ತ್ರೀ, ಬ್ರಹ್ಮಾವರ



ವಿಜ್ಞಾನ, ತಂತ್ರಜ್ಞಾನ ಎಷ್ಟೇ ಮುಂದು ವರಿದರೂ ಚಿತ್ರಕಲೆ ಅದರ ಹೊಡೆತದಿಂದ ಬಲು ದೂರವಿದೆ ಎಂದರೆ ತಪ್ಪಾಗಲಾರದು. ಉಡುಪಿಯ ಜಂಗಮ ಮಠದ ಚಿತ್ರಕಲಾ ಮಂದಿರದ ವಿಭೂತಿ ಆರ್ಟ್ ಗ್ಯಾಲರಿಯಲ್ಲಿ ಮಣಿಪಾಲದಲ್ಲಿ ಸೈಕಿಯಾಟ್ರಿಕ್ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಡಾ| ಗುಣಸಾಗರಿರಾವ್ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ ಇತ್ತೀಚೆಗೆ ಜರಗಿತು. ಇವರು ನಮ್ಮ ಸಮಾಜದ ಹೆಮ್ಮೆಯ ಚಿತ್ರ ಕಲಾವಿದೆಯಾಗಿರುವುದು ಸಂತಸದ ವಿಷಯ.

ಸುಮಾರು 31 ಚಿಕ್ಕ ಹಾಗೂ ದೊಡ್ಡ ಕಲಾಕೃತಿಗಳಿದ್ದು, ಆಕ್ರಲಿಕ್ ಮಾಧ್ಯಮದಿಂದ ರಚಿತವಾಗಿದ್ದವು. ಎಲ್ಲಾ ಚಿತ್ರಗಳು ನೈಜತೆಯಿಂದ ಕೂಡಿದ್ದು ಜನಸಾಮಾನ್ಯರನ್ನು ಆಕರ್ಷಿಸಬಲ್ಲಂತಹ ಕಲಾಕೃತಿಗಳಾಗಿದ್ದವು. ಕೆಲವೊಂದು ಕಲಾಕೃತಿಗಳು 'Still Life' ಗೆ ಸಂಬಂಧಪಟ್ಟಿದ್ದು, ನೈಜತೆಯನ್ನು ಬಿಂಬಿಸುವಂತಿತ್ತು. ಜಾನಪದ ಕಲೆಗೆ ಸಂಬಂಧಿಸಿದ ಭೂತದ ಕೋಲದ ಮುಖವಾಡಗಳ ಚಿತ್ರಗಳು ಆಕರ್ಷಕವಾಗಿತ್ತು. ಸೂರ್ಯಾಸ್ತದ ಸಂಜೆಯ ಸೊಬಗಲ್ಲಿ ತಂಬೂರಿ ಹಿಡಿದು ಭಾವ ಪರವಶವಾಗಿ ಹಾಡುತ್ತಿರುವ ಮಹಿಳೆ ಸೊಗಸಾಗಿ ಮೂಡಿಬಂದಿತ್ತು. ಇನ್ನು ಮಲೇಶಿಯನ್ ಶೈಲಿಯಲ್ಲಿ ಶ್ರೀ ರಾಮಚಂದ್ರನು ಹನುಮಂತನಿಗೆ ಉಂಗುರ ನೀಡುವ ಚಿತ್ರ, ಆಫ್ರಿಕನ್ ಶೈಲಿಯ ತಾಯಿ-ಮಗು, ಇಂಡೋನೇಶಿಯಾ ಶೈಲಿಯ ಅಲಂಕರಿಸಿದ ಆನೆ, ಕಡು ಮತ್ತು ತಿಳಿ ನೀಲಿ ಬಣ್ಣದಿಂದ ರಚಿಸಿದ ಕೊಳಲನ್ನು ಊದುತ್ತಿರುವ ಶ್ರೀಕೃಷ್ಣನ ಜತೆಗೆ ಹಸುಗಳು ಉತ್ತಮ ಕಲಾಕೃತಿಗಳಾಗಿದ್ದವು. ಹಾಗೆಯೇ ತರಕಾರಿ ಮಾರುವ ಮಹಿಳೆಯರು, ಗಂಡು ಕೋಳಿ, ಲಂಗರು ಹಾಕಿದ ದೋಣಿ, ಮಿನಿಯೇಚರ್ ಶೈಲಿಯ ಮಹಿಳೆಯ ಭಾವಚಿತ್ರ, ಯಕ್ಷಗಾನ, ನರ್ಸಣ್ಣ, ಹೂಗಳಿಂದ ತುಂಬಿದ ಸುಂದರ ವನರಾಶಿ ಮನಕ್ಕೆ ಕಣ್ಣಿಗೆ ಹಿತ ಅನುಭವ ನೀಡಿದವು.





ಒಟ್ಟಿನಲ್ಲಿ ಎಲ್ಲಾ ವರ್ಗದ ಜನರನ್ನು ಆಕರ್ಷಿಸಿದ ಈ ಚಿತ್ರ ಪ್ರದರ್ಶನ ಸಾರ್ಥಕ್ಯ ಕಂಡಿತು. ಡಾ| ಗುಣಸಾಗರಿ ರಾವ್ ಅವರಿಗೆ ನಾವೆಲ್ಲ ಶುಭ ಕೋರೋಣ, ಹಾಗೇ ಅವರಿಂದ ಇನ್ನಷ್ಟು ಚಿತ್ರಕಲಾ ಪ್ರಪಂಚಕ್ಕೆ ಕೊಡುಗೆ ಸಿಗಲಿ ಎಂದು ಹಾರೈಸೋಣ.

# ಬಣ್ಣದ ಸಕ್ಕಟ್ಟು ಶ್ರೀ ಲಕ್ಷ್ಮೀನಾರಾಯಣಯ್ಯನವರ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪನೆ



ನಮ್ಮ ಸಮಾಜದ ಹಿರಿಯರೂ, ಪ್ರಖ್ಯಾತ ಕಲಾವಿದರೂ, 'ಯಕ್ಷರಂಗದ ರಾಕ್ಷಸ' ರೆಂದೇ ಖ್ಯಾತರಾದ ಬಣ್ಣದ ವೇಷಧಾರಿ ಸಕ್ಕಟ್ಟು ಶ್ರೀ ಲಕ್ಷ್ಮೀ ನಾರಾಯಣ ರಾಯರ ಹೆಸರಲ್ಲಿ ಪ್ರತಿಷ್ಠಾನವೊಂದನ್ನು ಸ್ಥಾಪಿಸಲಾಗಿದೆ. ಇದೀಗ 85 ವರ್ಷದ ವಯೋವೃದ್ಧರಾದ ಈ ಅಭಿಜಾತ ಕಲಾವಿದರು ಬಹಳಷ್ಟು ಸಣ್ಣ ಪ್ರಾಯದಲ್ಲೇ ತಮ್ಮ ಹಿರಿಯರಿಂದ ಹಾಗೂ ತಜ್ಞ ಗುರುಗಳಿಂದ ಯಕ್ಷ ಶಿಕ್ಷಣವನ್ನು ಕಲಿತುಕೊಂಡು ಅರ್ಥಗಾರಿಕೆ, ವೇಷಗಾರಿಕೆಯನ್ನು ಕರಗತ ಮಾಡಿಕೊಂಡವರು. ಮಂದರ್ತಿ, ಮಾರಣಕಟ್ಟೆ ಮೊದಲಾದ ಮೇಳಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ತಮ್ಮದೇ ಆದ ಒಂದು ಛಾಪನ್ನು ಯಕ್ಷಗಾನದಲ್ಲಿ ಉಳಿಸಿಕೊಟ್ಟಿದ್ದಾರೆ. ಅಂತೆಯೇ ಹಿರಿಯ ಕವಿಗಳೂ ಯಕ್ಷಗಾನ ವಿದ್ವಾಂಸರೂ ಆದ ಡಾ| ಕೋಟ ಶಿವರಾಮ ಕಾರಂತರ ಯಕ್ಷರಂಗದಲ್ಲಿ ಬಣ್ಣದ ವೇಷಧಾರಿಯಾಗಿ ದೇಶ ವಿದೇಶಗಳಲ್ಲಿ ಯಕ್ಷಗಾನ ಹಾಗೂ ಬ್ಯಾಲೆ ತಂಡಗಳಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸಿ ಸೈ ಎನಿಸಿಕೊಂಡಿರುತ್ತಾರೆ. ವಿದೇಶಗಳಲ್ಲಿ ಇವರ ಪಾತ್ರದ ಬಣ್ಣಗಾರಿಕೆ, ಹೆಜ್ಜೆಗಾರಿಕೆ ಹಾಗೂ ಅವರ ಪಾತ್ರದ ಬ್ಯಾನರ್-ಪೋಸ್ಟರ್‌ಗಳು ವಿದೇಶಿಯರ ಗಮನ ಸೆಳೆದಿದ್ದು ಅಲ್ಲಿಯ ಆಸಕ್ತರು ನಮ್ಮ ಕರಾವಳಿ ಕರ್ನಾಟಕದ ಯಕ್ಷಗಾನ ಕಲೆಯ ಕಲಿಕೆಗೆ ಆಸಕ್ತಿವಹಿಸಿ, ಅನೇಕ ಕಲಾವಿದರು ಉಡುಪಿಯ ಯಕ್ಷಗಾನ ಕೇಂದ್ರದಲ್ಲಿ ಅನೇಕ ವರ್ಷ ಅಭ್ಯಾಸ ಮಾಡಿದ್ದೂ ಸತ್ಯಸಂಗತಿ ಯಾಗಿದೆ.

ಒಟ್ಟು 54 ವರ್ಷಗಳ ಕಾಲ ಕಲಾಸೇವೆ ಮಾಡಿರುವ ಇಂತಹ ಮಹಾನ್ ಕಲಾವಿದರ ಹೆಸರಲ್ಲಿ ಒಂದು ಪ್ರತಿಷ್ಠಾನವನ್ನು ಸ್ಥಾಪಿಸಲಾಗಿದೆ. ಅಲ್ಲದೆ ಪ್ರತಿಷ್ಠಾನದ ವತಿಯಿಂದ ಪ್ರತಿವರ್ಷ ಅವರ ಹೆಸರಲ್ಲಿ ಪ್ರಶಸ್ತಿ ಹಾಗೂ ಆಸಕ್ತ ಕಲಾವಿದರಿಗೆ ಸಹಾಯಧನ ನೀಡುವ ಘನ ಉದ್ದೇಶವನ್ನು ಪ್ರತಿಷ್ಠಾನವು ಇರಿಸಿಕೊಂಡಿದೆ.

ಶ್ರೀ ಕ್ಷೇತ್ರ ಕೊಲ್ಲೂರಿನ ಕ್ಷೇತ್ರ ಪುರೋಹಿತರಾದ ಶ್ರೀ ರವೀಂದ್ರ ಜೋಯಿಸ್ ರವರು ಗೌರವಾಧ್ಯಕ್ಷರಾಗಿರುವ ಕಾರ್ಯಕಾರಿ ಮಂಡಳಿಯನ್ನು ರಚಿಸಲಾಗಿದೆ. ಸಮಿತಿಯಲ್ಲಿ ಅಧ್ಯಕ್ಷರಾಗಿ ಶ್ರೀ ರಾಮಕೃಷ್ಣಯ್ಯ ಬಸ್ರೂರು, ಕೋಶಾಧಿಕಾರಿಯಾಗಿ ಶ್ರೀ ಮಂಜುನಾಥಯ್ಯ ಸಕ್ಕಟ್ಟು, ಕಾರ್ಯದರ್ಶಿಯಾಗಿ ಶ್ರೀ ಟಿ. ಚಾಮರಾಜ ಶ್ಯಾನುಭೋಗ್ ಸಾಗರ, ಲೆಕ್ಕಪರಿಶೋಧಕರಾಗಿ ಶ್ರೀ ಸಕ್ಕಟ್ಟು ವಾಸುದೇವ ರಾವ್ ಸಿ.ಎ. ಕಾರ್ಕಳ ಹಾಗೂ ಸುಮಾರು ಐವತ್ತಾರು ಜನ ಸದಸ್ಯರನ್ನು ಸರ್ವಾನುಮತದಿಂದ ಆರಿಸಲಾಗಿದೆ. ಸಮಿತಿಯು ಈಗಾಗಲೇ ಮುಂದೆ ನಡೆಯಬೇಕಾದ ಕಾರ್ಯಗಳ ರೂಪುರೇಷೆಗಳನ್ನು ಸಿದ್ಧಪಡಿಸಿದ್ದು, ಧನಸಂಗ್ರಹ ಕಾರ್ಯವನ್ನು ಪ್ರಾರಂಭಿಸಿದೆ.

ಕಲಾಭಿಮಾನಿಗಳು, ಸಕ್ಕಟ್ಟು ಲಕ್ಷ್ಮೀನಾರಾಯಣಯ್ಯನವರ ಅಭಿಮಾನಿಗಳೂ ತನು ಮನ ಧನಗಳ ಸಹಾಯವನ್ನು ನೀಡಿ ಸಹಕರಿಸಬೇಕೆಂದು ಮಂಡಳಿಯು ವಿನಂತಿಸಿಕೊಂಡಿದೆ. ಧನ ಸಹಾಯವನ್ನು ಚೆಕ್ ಅಥವಾ ಡಿ.ಡಿ. ಮೂಲಕ **ವಿಜಯಾಬ್ಯಾಂಕ್, ಕಂಡ್ಲೂರು ಶಾಖೆಯ ಉಳಿತಾಯ ಖಾತೆ ಸಂಖ್ಯೆ 110801011000282** ಇದಕ್ಕೆ ಕಳುಹಿಸಬೇಕೆಂದೂ ತಮ್ಮ ವಿವರವನ್ನು ಈ ಕೆಳಗಿನ ವಿಳಾಸಕ್ಕೆ ಅಂಚೆ ಮೂಲಕ ತಿಳಿಸಬೇಕೆಂದೂ ಮಂಡಳಿಯು ವಿನಂತಿಸಿಕೊಂಡಿದೆ.

**ವಿಳಾಸ : ಬಣ್ಣದ ಸಕ್ಕಟ್ಟು ಶ್ರೀ ಲಕ್ಷ್ಮೀ ನಾರಾಯಣಯ್ಯ ಪ್ರತಿಷ್ಠಾನ, ಸೌಕೂರು, ಅಂಚೆ ಗುಲ್ವಾಡಿ - 576 211, ಕುಂದಾಪುರ ತಾಲೂಕು.**

**ಬಣ್ಣದ ಸಕ್ಕಟ್ಟುರವರ ವಿವರವಾದ ಲೇಖನವನ್ನು ಶ್ರೀಶಾರದಾ ಪತ್ರಿಕೆಯಲ್ಲಿ ಈ ಹಿಂದೆ ವಿವರವಾಗಿ ಪ್ರಕಟಿಸಲಾಗಿದೆ. ಓದುಗರು ಗಮನಿಸಬೇಕಾಗಿ ವಿನಂತಿ.**


## ಪ್ರತಿಭಾ ಪುರಸ್ಕಾರ

### ದಿವಂಗತ ಕೆ. ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ-ಕುಳಾಯಿ

2009-10ರ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಅಂತಿಮ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ, ಮಂಗಳೂರು-4 ಇಲ್ಲಿ ದಿನಾಂಕ 17-10-2010 ನವರಾತ್ರಿ ಪ್ರಯುಕ್ತ ಜರಗುವ ನಾಡ ಹಬ್ಬದಂದು ಮೇಲೆ ತಿಳಿಸಿದ ಪ್ರತಿಷ್ಠಾನದ ವತಿಯಿಂದ ಪುರಸ್ಕರಿಸಲಾಗುವುದು. ದ.ಕ. ಮತ್ತು ಉಡುಪಿ ಜಿಲ್ಲೆಯ ಅರ್ಹ ವಿದ್ಯಾರ್ಥಿಗಳು ತಮ್ಮ ದೂರವಾಣಿ, ವಿಳಾಸದೊಂದಿಗೆ ಅಂಕಪಟ್ಟಿಯ ಯಥಾ ನಕಲನ್ನು ತಾ.01-10-2010ರ ಒಳಗಾಗಿ ಶ್ರೀ ಸುಬ್ರಹ್ಮಣ್ಯ ಸಭಾದ ಕಾರ್ಯದರ್ಶಿಯವರಲ್ಲಿ ಕೊಡಬೇಕಾಗಿ ಕೋರಲಾಗಿದೆ.

**ಎಚ್. ದೇವಾನಂದ್ ಭಟ್**
Cell : 9845644556
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ
**ಬೆಳ್ವಾಯಿ-574213**
(08258)-276177 (O), (918258)-324133 (O), 276777 (R)
**ಎಡಪದವು - 574 164** (0824)-256374 (O) **ಮಂಗಳೂರು, ದ.ಕ.**


# "ಹರಿಕಥೆ" ಅಪೇಕ್ಷಿತವೇ? ಅನಪೇಕ್ಷಿತವೇ?-೬



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ಹರಿಕಥೆಯಲ್ಲಿ ಉಪಕಥೆಗಳು :- ಈ ಮೊದಲೇ ನಾವು ತಿಳಿದಂತೆ ಮಾನವನು ಭಾವಜೀವಿ. ಅವನ ಭಾವನೆಗಳಿಗೆ ಸರಿಯಾಗಿ ಸ್ಪಂದಿಸಿ ಅವುಗಳನ್ನು ಉದಾತ್ತೀಕರಣ ಗೊಳಿಸುವುದು ಎಲ್ಲಾ ಬಗೆಯ ಧಾರ್ಮಿಕ, ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳ ಉದ್ದೇಶ. ಕೆಲವು ಬಾರಿ ಹರಿದಾಸನು ಪ್ರೇಕ್ಷಕರಿಗೆ ತಿಳಿಯಪಡಿಸುವ ವಿಷಯವು ಕ್ಲಿಷ್ಟವಾಗಿದ್ದು, ಅವನಿಗೆ ಅನಪೇಕ್ಷಿತವಾಗಿರುವುವುಗಳೂ ಇರುತ್ತವೆ. ಅಂತಹ ಸಂದರ್ಭಗಳಲ್ಲಿ ಹೇಳು ವಿಷಯವು ಕಹಿಯಾಗಿದ್ದಲ್ಲಿ ಅದಕ್ಕೆ ಸಿಹಿಯನ್ನು ಬೆರೆಸಿ ಹೇಳಬೇಕಾದುದು ಹರಿದಾಸನ ಕರ್ತವ್ಯ. ಕ್ಲಿಷ್ಟವಾಗಿರುವ ವಿಷಯವು ಶ್ರೋತೃವಿಗೆ ಸುಲಭವಾಗಿ ಅರ್ಥವಾಗಬೇಕಾಗಿದ್ದರೆ ಸೂಕ್ತ ಉದಾಹರಣೆ, ನಿದರ್ಶನಗಳನ್ನು ಕೊಟ್ಟು ವಿವರಿಸಬೇಕು. ಇಂತಹ ಸಂದರ್ಭದಲ್ಲಿ ಹರಿದಾಸನು ಕೆಲವೊಂದು ಮನರಂಜನೆ ಯನ್ನೊದಗಿಸುವ ಉಪಕಥೆಗಳನ್ನು ಆಶ್ರಯಿಸ ಬೇಕು. ತಾನು ಹೇಳುತ್ತಿರುವ ಕಥೆಯು ಮಾನವನಿಗೆ ಎಂತಹ ಸಂದೇಶವನ್ನು ನೀಡುತ್ತದೆಯೋ ಆ ಸಂದೇಶಕ್ಕೆ ಸಂಬಂಧಿಸಿದಂತೆ ಹರಿದಾಸನು ಪ್ರಸ್ತುತಪಡಿಸುವ ಉಪಕಥೆ ಯಿರಬೇಕು. ಸಾಮಾನ್ಯವಾಗಿ ಮಾನವ ಜೀವನಕ್ಕೆ ತೀರಾ ಸಮೀಪವಾಗಿರುವ, ಸಮಾಜ ಪರಿಸರಗಳಲ್ಲಿ ಕಂಡುಬರುವಂತಹ ವಿಷಯ, ಸನ್ನಿವೇಶ ಇತ್ಯಾದಿಗಳನ್ನು ಉಪಕಥೆಗಳು ಚಿತ್ರಿಸಬೇಕು. ಸತ್ಯ, ನ್ಯಾಯ, ಧರ್ಮ, ನೀತಿ, ಇತ್ಯಾದಿಗಳನ್ನು ಕಥೆಗಳ ಮೂಲಕವಾಗಿ, ಸೂಕ್ತ ಉದಾಹರಣೆಗಳಿಂದ ವಿವರಿಸಿದರೆ ಜನರಿಗೆ ಸುಲಭವಾಗಿ ವಿಷಯವು ಮಂದಟ್ಟಾಗುತ್ತದೆ.

ಕೆಲವರು ತಮ್ಮ ಉಪಕಥೆಗಳಲ್ಲಿ ಅಶ್ಲೀಲ ವಿಚಾರಗಳನ್ನು, ಕಥೆಗೆ ಸಂಬಂಧವಿಲ್ಲದ ಉಪಕಥೆಗಳನ್ನು ಕೇವಲ ಜನರ ಮನ ರಂಜನೆಯ ದೃಷ್ಟಿಯಿಂದ ಪ್ರಸ್ತುತಪಡಿಸುವು ದುಂಟು. ಇದೆಂದಿಗೂ ಸೂಕ್ತವಲ್ಲ. ಉಪಕಥೆಗಳು ಉತ್ತಮ ಸಂದೇಶವನ್ನು ನೀಡುವಂತಿರಬೇಕು. ಈ ಉಪಕಥೆಗಳು ಸಾಕಷ್ಟು ಚುಟುಕಾಗಿರಬೇಕು. ಮುಖ್ಯ ಕಥೆಯ ಹೆಚ್ಚಿನ ಸಮಯವನ್ನು, ಪ್ರಾಮುಖ್ಯತೆಯನ್ನು ಕಬಳಿಸುವಂತಿರಬಾರದು. ಹಿತಮಿತವಾದ, ಮನರಂಜನೆಯನ್ನೂ, ಹಾಸ್ಯವನ್ನೂ, ಒದಗಿಸುವ ಉಪಕಥೆಯು ಹರಿಕಥೆಯ ರುಚಿಯನ್ನು ಹೆಚ್ಚಿಸುತ್ತದೆ. ಸಭೆಯಲ್ಲಿ ಕುಳಿತು ಕಥೆ ಕೇಳುತ್ತಿರುವ ಶ್ರೋತೃಗಳ ಗಮನ ತನ್ನ ಕಡೆಗಿರುವಂತೆ ನೋಡಿಕೊಳ್ಳಬೇಕಾದುದು ಹರಿದಾಸನಾದವನ ಕರ್ತವ್ಯವಾಗಿದೆ. ಕೆಲವು ಬಾರಿ ಹರಿದಾಸನು ಹೇಳುತ್ತಿರುವ ಕಥೆಯು ಕೇವಲ ಒಣ ವೇದಾಂತವಾಗಿದ್ದು ಪ್ರೇಕ್ಷಕರಿಗೆ ಹಿಡಿಸದೇ ಇರುವ ಸಂದರ್ಭದಲ್ಲಿ ಅವರು ಎದ್ದು ಹೋಗುವ ಅಥವಾ ಹರಿದಾಸರ ಕಡೆಗಿನ ಗಮನವನ್ನು ಬೇರೆಡೆಗೆ ತಿರುಗಿಸಿ ತಮ್ಮ ತಮ್ಮೊಳಗೇ ಮಾತನಾಡುವ ಪರಿಸ್ಥಿತಿಗಿಳಿಯ ಬಹುದು. ಇಂತಹ ಸಂದರ್ಭಗಳಲ್ಲಿ ಹರಿದಾಸನು ತುಂಬಾ ಜಾಗರೂಕನಾಗಿದ್ದು ಶ್ರೋತೃಗಳ ಗಮನವನ್ನು ತನ್ನಲ್ಲೇ ಕೇಂದ್ರೀಕರಿಸ ಲೋಸುಗ ಅವರ ಅಭಿರುಚಿಗನುಗುಣವಾದ ಉಪಕಥೆಗಳನ್ನೂ, ಹಾಸ್ಯ ಚಟಾಕಿಯನ್ನೂ ಆಗಾಗ ಸೃಷ್ಟಿಸುತ್ತಿರಬೇಕು. ಇದು ಮುಖ್ಯಕಥೆಗೆ ಪೋಷಕವಾಗಿಯೇ ಇರಬೇಕಾದುದು ಅವಶ್ಯ ವೆಂಬುದನ್ನು ಹರಿದಾಸನು ತಿಳಿದರಬೇಕಾದುದು ಅನಿವಾರ್ಯ.

(ಮುಂದುವರಿಯುವುದು)

## ಸಾಂಘಿಕ ಬದುಕು ನಿಜವಾದ ಜೀವನ : ಪಿ.ಬಿ.ವಾಸುದೇವರಾವ್

ಮನುಷ್ಯ ಸಂಘ ಜೀವಿ. ಸಂಘಟನೆ ಮೂಲಕ ಆತ ವ್ಯಕ್ತಿತ್ವವನ್ನು ರೂಪಿಸುತ್ತಾನೆ. ಸಾಮಾಜಿಕ ಬದುಕು ನಿಜವಾದ ಜೀವನ. ಪಡುಬಿದ್ರಿ ಸ್ಥಾನಿಕ ಸಭಾ ಉತ್ತಮ ಸಂಘಟನೆಯಾಗಿ ಬೆಳೆದು ಬರಲಿ ಎಂದು ಪಿ.ಬಿ.ವಾಸುದೇವ ರಾವ್, ಪಡುಬಿದ್ರಿಯವರು ಹೇಳಿದರು. ಇವರು ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾದ ಮೊದಲ ಮಹಾಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪದ್ಮರಾಜ ರಾವ್ ಪಡುಬಿದ್ರಿ ಹಾಗೂ ಬಾಲಚಂದ್ರ ರಾವ್ ಪಡುಬಿದ್ರಿ ಭಾಗವಹಿಸಿದ್ದರು. ಸಭೆಯಲ್ಲಿ ಮುಂದಿನ 3 ವರ್ಷಕ್ಕೆ ನೂತನ ಕಾರ್ಯಕಾರಿ ಸಮಿತಿಯ ಸದಸ್ಯರನ್ನಲ್ಲದೆ 16 ಮಂದಿ ನಿರ್ದೇಶಕರನ್ನೂ, 3 ಉಪಸಮಿತಿ ಸಂಚಾಲಕರನ್ನೂ ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ವೈ. ವಿ. ಸುಬ್ಬರಾವ್, ನರೇಂದ್ರ ಸ್ವಾಮಿ, ಶ್ರೀಮತಿ ಲಲಿತಾಂಬ, ಶ್ರೀಮತಿ ಸೀತಾದೇವಿ ಭಾಸ್ಕರ್ ಅಭಿಪ್ರಾಯ ವ್ಯಕ್ತಪಡಿಸಿದರು. ಕಾರ್ಯದರ್ಶಿ ಸುಧಾಕರ ಬೆಳ್ಳೆ ಸ್ವಾಗತಿಸಿದರು. ಸುದರ್ಶನ ವೈ.ಯಸ್. ನಿಯಮಾವಳಿಗಳನ್ನು ಮಂಡಿಸಿದರು. ಎಂ.ಕೆ.ದಿವಾಕರ್ ರಾವ್ ಪ್ರಸ್ತಾವಿಕ ಮಾತುಗಳನ್ನಾಡಿದರು. ನೂತನ ಅಧ್ಯಕ್ಷರಾದ ಎಂ.ಕೆ.ಮೋಹನ ರಾವ್ ಕೆಲವು ಯೋಜನೆಗಳನ್ನು ಪ್ರಸ್ತಾಪ ಮಾಡಿ ಸದಸ್ಯರ ಸಹಕಾರ ಕೋರಿದರು. ಶ್ರೀ ಜಗದಾಭಿರಾಮ ಸ್ವಾಮಿ ವಂದಿಸಿದರು. ಶ್ರೀ ಭುಜಂಗ ರಾವ್ ಸಭೆಯನ್ನು ಹಾಗೂ ಮಧ್ಯಾಹ್ನದ ಭೋಜನವನ್ನು ಪ್ರಾಯೋಜಿಸಿದ್ದರು.

ತಾ.29-08-2010ರಂದು ನಂದಗೋಕುಲದಲ್ಲಿ ನೂತನ ಸಭಾದ ಉದ್ಘಾಟನಾ ಸಮಾರಂಭವು ಜರಗಲಿದ್ದು ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ವಿನಂತಿಸಲಾಗಿದೆ.

## ಪಡುಬಿದ್ರಿ : ಋಗುಪಾಕರ್ಮ ಆಚರಣೆ

ಸ್ಥಾನಿಕ ಬ್ರಾಹ್ಮಣ ಸಭಾ, ಪಡುಬಿದ್ರಿ ಇದರ ಆಶ್ರಯದಲ್ಲಿ ತಾ.23-08-2010ರಂದು ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನ, ಪಡುಬಿದ್ರಿ ಇಲ್ಲಿ ಬೆಳಿಗ್ಗೆ 6-30ಕ್ಕೆ ಸರಿಯಾಗಿ ಋಗುಪಾಕರ್ಮ ಆಚರಿಸುವುದೆಂದು ನಿರ್ಧರಿಸಲಾಗಿದೆ. ನೂತನ ವಟುಗಳು ದಂಡೀಕೋಲು ವಿಸರ್ಜನೆಗಾಗಿ ದೇವಳದ ಅರ್ಚಕರಾಗಿರುವ ಶ್ರೀ ಜಗದಾಭಿರಾಮ ಸ್ವಾಮಿ ಇವರಿಗೆ ಮುಂಚಿತವಾಗಿ ತಿಳಿಸಬೇಕಾಗಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.


## ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಉದ್ಘಾಟನಾ ಸಮಾರಂಭ

ಪಡುಬಿದ್ರಿಯಲ್ಲಿ ನೂತನವಾಗಿ ಪ್ರಾರಂಭವಾದ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಭಾದ ಉದ್ಘಾಟನಾ ಸಮಾರಂಭವು ತಾ.29-08-2010ರಂದು ನಂದಗೋಕುಲ ಪಡುಬಿದ್ರಿ ಇಲ್ಲಿ ಬೆಳಿಗ್ಗೆ 11-00 ಗಂಟೆಗೆ ಜರಗಲಿದೆ.

ಮಾರ್ಪಳ್ಳಿ ವಾಸುದೇವರಾವ್, ನಿರ್ದೇಶಕರು, ವಿಮಾನ ನಿಲ್ದಾಣ ಮಂಗಳೂರು ಇವರು ನೂತನ ಸಭಾವನ್ನು ಉದ್ಘಾಟಿಸಲಿದ್ದಾರೆ. ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ, ಶ್ರೀ ವೇಣುಗೋಪಾಲ ರಾವ್ ಉಡುಪಿ, ಶ್ರೀ ಕೆ. ಪ್ರಭಾಕರ ರಾವ್ ಎಮ್‌ಸಿಎಫ್ ಮಂಗಳೂರು ಇವರು ಅತಿಥಿಗಳಾಗಿರುತ್ತಾರೆ. ಸಂಘದ ಗೌರವಾಧ್ಯಕ್ಷರಾದ ಪಿ. ಬಿ. ವಾಸುದೇವರಾವ್ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದ ಮೊದಲು ಬೆಳಿಗ್ಗೆ 10-00 ಗಂಟೆಯಿಂದ ಶಾಸ್ತ್ರೀಯ ನೃತ್ಯ ಕಾರ್ಯಕ್ರಮ ಜರಗಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಸಂಘದ ಅಧ್ಯಕ್ಷರಾಗಿರುವ ಎಂ.ಕೆ.ಮೋಹನರಾವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಶ್ರೀ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿವೇತನ ನಿಧಿ



ನಮ್ಮ ಸಂಘದ ಸ್ಥಾಪಕರಲ್ಲೊಬ್ಬರಾಗಿ, ಸಂಘದ ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ಸಂಘದ ಸರ್ವಾಂಗೀಣ ಅಭಿವೃದ್ಧಿಗೆ ಕಾರಣರಾಗಿದ್ದ ಅಂಬಲಪಾಡಿ ಕೃಷ್ಣರಾಯರು ಇತ್ತೀಚೆಗೆ ದೈವಾಧೀನರಾಗಿದ್ದಾರೆ. ಸಮಾಜ ಬಾಂಧವರೆಲ್ಲರಿಗೆ ಆತ್ಮೀಯರಾಗಿದ್ದು, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಲಯದಲ್ಲಿ ವಿಶೇಷವಾಗಿ ಗೌರವಿಸಲ್ಪಡುತ್ತಿದ್ದ ಕೃಷ್ಣ ರಾಯರು ಆರ್ಥಿಕವಾಗಿ ದುರ್ಬಲವಾಗಿದ್ದ ಕುಟುಂಬದಲ್ಲಿ ಜನಿಸಿ, ಛಲಗಾರನಾಗಿ ನಡೆದು ಉನ್ನತ ಶಿಕ್ಷಣವನ್ನು ಪಡೆದು ರಾಷ್ಟ್ರೀಕೃತ ಬ್ಯಾಂಕಿನ ಅತ್ಯುನ್ನತ ಹುದ್ದೆಯನ್ನು ಅಲಂಕರಿಸಿದರು. ಮಹಾ ವಿದ್ಯಾಭಿಮಾನಿಯಾಗಿದ್ದ ಅವರಿಗೆ ನಮ್ಮ ಸಮಾಜದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಿ ಬೆಳೆದು ಹೆತ್ತವರಿಗೆ ಹಾಗೂ ಸಮಾಜಕ್ಕೆ ಹೆಸರು ತರಬೇಕು ಎಂಬುದು ಮನದಾಳದ ಬಯಕೆಯಾಗಿತ್ತು. ಅದಕ್ಕಾಗಿ ಸಂಘದಲ್ಲಿ ವಿದ್ಯಾರ್ಥಿವೇತನ ನಿಧಿಯನ್ನು ಬಲಪಡಿಸಿ ಅರ್ಹ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಸಹಕರಿಸಬೇಕೆಂದು ಅವರು ಬಲವಾಗಿ ಪ್ರತಿಪಾದಿಸುತ್ತಿದ್ದರು.

ಸಂಘದ ಸ್ಥಾಪಕರಾಗಿ ಅಭಿವೃದ್ಧಿಯ ಹರಿಕಾರನಾಗಿದ್ದ ದಿ| ಅಂಬಲಪಾಡಿ ಕೃಷ್ಣ ರಾಯರ ನೆನಪಿನಲ್ಲಿ ಶ್ರೀ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿವೇತನ ನಿಧಿಯನ್ನು ಆರಂಭಿಸಲು ಸಂಘದ ಆಡಳಿತ ಮಂಡಳಿ ನಿರ್ಧರಿಸಿದೆ. ಈ ನಿಧಿಯಿಂದ ಬರುವ ಆದಾಯದಿಂದ **ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿಯಲ್ಲಿ ರ್‍ಯಾಂಕ್ ಗಳಿಸಿದ ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲು ಉದ್ದೇಶಿಸಲಾಗಿದೆ.** ವಿದ್ಯಾರ್ಥಿವೇತನ ನಿಧಿಯನ್ನು ಈಗಾಗಲೇ ಸಾಂಕೇತಿಕವಾಗಿ ಆರಂಭಿಸಿದ್ದು ದಿವಂಗತ ಅಂಬಲಪಾಡಿ ಕೃಷ್ಣರಾಯರ ಆತ್ಮೀಯರು ಹಾಗೂ ವಿದ್ಯಾಭಿಮಾನಿಗಳು ಈ ನಿಧಿ ಗೆ ದೇಣಿಗೆ ನೀಡಿ ನಿಧಿಯನ್ನು ಬಲಪಡಿಸಲು ನೆರವಾಗುವಂತೆ ವಿನಂತಿಸುತ್ತೇವೆ. ದೇಣಿಗೆ ನೀಡುವವರು ನಗದು, ಮನಿಆರ್ಡರ್ ಅಥವಾ "ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿ" ಹೆಸರಿನಲ್ಲಿ ಚೆಕ್ ಅಥವಾ ಡ್ರಾಫ್ಟ್ ಮೂಲಕ ಕಳುಹಿಸಬೇಕೆಂದು ಕೋರಲಾಗಿದೆ.

**ಆಡಳಿತ ಮಂಡಳಿಯ ಪರವಾಗಿ,**
ಕಾರ್ಯದರ್ಶಿ, ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ.

## ಅಂಬಲಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ವೇತನ ನಿಧಿಗೆ ದೇಣಿಗೆ ನೀಡಿದವರು

| | | |
|---|---|---|
| 1. | ಶ್ರೀ ಕೆ. ವೇಣುಗೋಪಾಲರಾವ್ ಮತ್ತು ಶ್ರೀಮತಿ ವೇಣುಗೋಪಾಲ್‌ರಾವ್, ಅಂಬಲಪಾಡಿ | 10,001.00 |
| 2. | ಶ್ರೀ ಕೆ. ನಿರಂಜನರಾವ್ ಮತ್ತು ಶ್ರೀಮತಿ ಶಾಲಿನಿ ನಿರಂಜನರಾವ್, ಅಂಬಲಪಾಡಿ | 5,001.00 |
| 3. | ಶ್ರೀ ಬಿ. ಜಯರಾಮ ರಾವ್, ಉಡುಪಿ | 2,000.00 |

**PRAMOD**
AUTOMOBILES
KARANGALPADY, MANGALORE - 575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

**Buying and selling shares as easy as checking your emails**
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan
Visit : www.sharekhan.com

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ| ಪ್ರೊ| ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

ಪ್ರತಿಯೊಂದು ದಶಕಕ್ಕೆ ಒಂದೊಂದು ನವೀನ ವಿಷಯವು ಸೇರಿಸಲ್ಪಟ್ಟಿತೆಂದು ಹೇಳಬೇಕಾಗುತ್ತದೆ. ಕ್ರಿ.ಶ.1198ರ ತಾಮ್ರ ಶಾಸನ ಪ್ರಕಾರ, ಹರನವಿಶಾಲವಾದ ಲಲಾಟದಿಂದ ಒಂದು ಹನಿ ಬೆವರು ಕದಂಬ ವೃಕ್ಷದ ಅಡಿಯಲ್ಲಿ ನೆಲಕ್ಕೆ ಬಿದ್ದು, ದೀರ್ಘವಾದ ನಾಲ್ಕು ತೋಳುಗಳುಳ್ಳ ಹಾಗೂ ಹಣೆಯಲ್ಲಿ ಕಣ್ಣುಳ್ಳ, ಪುರಾರಿಯಂತೆಯೇ ಪರಿಶುದ್ಧನೂ, ವಿದ್ಯಾವಂತನೂ, ಆದ ಕದಂಬನು ಜನಿಸಿದನು. ಆತನಿಂದ ಪ್ರಪಂಚವನ್ನು ತನ್ನಂಕೆಯಲ್ಲಿರಿಸಿಕೊಳ್ಳಲು ಸಾಧ್ಯವಾದ ಮಯೂರವರ್ಮನು ಜನಿಸಿದನು''. ಮಯೂರವರ್ಮನ ಕತೆಯೂ ಮಯೂರದ ಗರಿಗಳ ಕುರಿತೂ ಹನ್ನೆರಡನೆಯ ಶತಮಾನದಲ್ಲಿ ಪ್ರಚಾರವಾಗಿದ್ದ ವಿವರವನ್ನೊಳಗೊಂಡ ದಾಖಲೆಯ ಕ್ರಿ.ಶ.1189ರ ಕಾಲದೇವನೆಂಬವನ ಶಾಸನದಿಂದಲೂ ತಿಳಿಯುಬಲ್ಲದು. ''ಹರನ ಸದ್ಗುಣಗಳನ್ನು ಭೂದೇವಿಯು ಕೊಳ್ಳಲಾಗಿ ಗಿರೀಶನ ಒಂದು ಭಾಗವೇ ಆದ ಲಲಾಟದಲ್ಲಿ ನೇತ್ರವುಳ್ಳ ನಾಲ್ಕು ಕೈಗಳುಳ್ಳ ಪುತ್ರನ ಜನನವಾಯಿತು. ಇದು ಗೌರಿಯು ಹಿಮಪರ್ವತದಲ್ಲಿ ಈಶ್ವರನು ಅವಳೊಡನೆ ಮೋಹಿತನಾಗಿ ನಡೆದ ವಿಚಾರ. ಈ ಸುಕುಮಾರನನ್ನು ಈಶ್ವರನು ಕಂಡು ಅವನು ಅರಸನಾಗುವಂತೆ ಹರಸಿದನು. ಮತ್ತು ಅವನು ಸಮರ ಹರನಿಗೂ ಭೂದೇವಿಗೂ ಜನಿಸಿದವನಾದ್ದರಿಂದ, ''ಹರಾಧರ್ಣಿ ಪ್ರಸೂತ'' ಎಂಬ ಬಿರುದನ್ನು ಪಡೆದನು. ಕದಂಬ ವೃಕ್ಷಗಳ ನಡುವೆ ಜನಿಸಿದುದರಿಂದ ಕದಂಬ ರುದ್ರನೆಂದೂ ಮಯೂರದ ಗರಿಗಳ ಪ್ರತಿಫಲನವು ಅವನ ಮೇಲೆ ಬಿದ್ದುದರಿಂದ ಮಯೂರವರ್ಮನೆಂದೂ ಬಿರುದಾಂಕಿತನಾದನು. ಈ ಕಾರಣಗಳಿಂದ ಸಾಧಾರಣ ಹನ್ನೆರಡನೆಯ ಅಥವಾ ಹದಿಮೂರನೆಯ ಶತಮಾನದಲ್ಲಿ ಈ ತೆರನಾದ ಮಯೂರವರ್ಮನ ಕತೆಯು ತುಳುವಕ್ಕೆ ಹರಡಿತೆನ್ನಬಹುದು. ಹೀಗೆ ಹರಡಿದ ನಮ್ಮ ಗ್ರಾಮ ಪದ್ಧತಿಯಲ್ಲಿ ಸ್ಥಳೀಕ ಮಿರುಗನ್ನು, ಸೋಗನ್ನು ಕೊಟ್ಟಿರಬೇಕು.

7) ಅಹಿಚ್ಛತ್ರದ ಬ್ರಾಹ್ಮಣರನ್ನು ತರಿಸಿ ವಸತಿಗೊಳಿಸಿದ ವಿಚಾರ-ಹನ್ನೆರಡನೆಯ ಶತಮಾನಕ್ಕಿಂದ ಮೊದಲು ಅಹಿಚ್ಛತ್ರದ ಬ್ರಾಹ್ಮಣರ ಕುರಿತಾದ ಉಲ್ಲೇಖವಿದ್ದರೂ, ಮಯೂರವರ್ಮನ ಕುರಿತಾಗಲೀ, ಆತನಿಂದ ಗ್ರಾಮಗಳು ದಾನಕೊಡಲ್ಪಟ್ಟ ವಿಚಾರವಾಗಲೀ ತಿಳಿದು ಬರುವುದಿಲ್ಲ. ಎರೆಯಪ ನೀತಿಮಾರ್ಗನ ಕಾಲದ ಕ್ರಿ.ಶ.904ರ ಶಾಸನದಿಂದ ಈ ಕೆಳಗಿನ ಸಂಗತಿ ದೊರಕುತ್ತದೆ. ''ಯತಿಗಳ ಕೇಂದ್ರವಾದ, ಬ್ರಹ್ಮನ (ಪದ್ಮೋದ್ಭವ) ಸ್ಥಾನವಾದ ಅಹಿಚ್ಛತ್ರದಿಂದ, ದಕ್ಷಿಣದ ದೇಶಕ್ಕೆ ಅದನ್ನು ಪಾಪದಿಂದ ವಿಮುಕ್ತಗೊಳಿಸಿ, ಪರಿಶುದ್ಧವಾಗಿ ಮಾಡಲು, ವಿದ್ವಾಂಸರೂ, ಶೀಲ ಸಂಪನ್ನರೂ ಬಲ್ಲಿದರೂ, ಆದರ ಬ್ರಾಹ್ಮಣರ ತಂಡಗಳು ಖ್ಯಾತಿವೆತ್ತ ವನವಾಸಿ 'ವಿಷಯ' (Province)ವನ್ನು ಪ್ರಥಮವಾಗಿ ಬಂದು ಸೇರಿದುವು. ಈ ಬ್ರಾಹ್ಮಣರ ಎಲ್ಲ ಗುಂಪುಗಳನ್ನು ಶ್ರೇಷ್ಠವಾದ ತಲಗುಂದ ಗ್ರಾಮದಲ್ಲಿ ನಿಲ್ಲಿಸಲಾಯಿತು. ಈ ದಾಖಲೆಯಿಂದ ಒಂದು ಪ್ರಾಮುಖ್ಯ ಸತ್ಯ ಸಂಗತಿಯನ್ನು ತಿಳಿಸಲಾಯಿತು. ಹತ್ತನೆಯ ಶತಮಾನದ ಆದಿಯಲ್ಲಿ ಅಹಿಚ್ಛತ್ರವೆಂಬ ಪ್ರದೇಶಕ್ಕಾಗಲಿ, ಪರಶುರಾಮನ ಕುರಿತಾದ ಕತೆಗಾಗಲೀ, ಮಯೂರ ವರ್ಮನ ಪರವಾದ ಐತಿಹ್ಯಕ್ಕಾಗಲೀ, ಯಾವ ಸಂಬಂಧವೂ ನಿರ್ಮಿಸಲ್ಪಡಲಿಲ್ಲ. ತುಳುಗ್ರಾಮ ಪದ್ಧತಿಗಳಲ್ಲಿ ಕಂಡುಬರುವ ಬ್ರಾಹ್ಮಣರಿಗಿತ್ತ 32 ಗ್ರಾಮಗಳೆಂಬುದು, ಹನ್ನೊಂದನೆಯ ಶತಮಾನದಲ್ಲಿ ಸ್ಥಾನಗುಂದ ಅಗ್ರಹಾರದ (ತಲಗುಂದ) ಬ್ರಾಹ್ಮಣರಲ್ಲಿ ಪ್ರಚಲಿತವಿದ್ದ (ಕ್ರಿ.ಶ.1200ರ ಶಾಸನ ತಿಳಿಸುವಂತೆ) ಅಹಿಚ್ಛತ್ರದಿಂದ 12000 ಅಗ್ನಿಹೋತ್ರಗಳಿಂದ ಶುದ್ಧೀಕರಣಗೊಂಡ 32 ಬ್ರಾಹ್ಮಣ ಕುಟುಂಬಗಳು ಎಂಬುದರ ಒಂದು ರೂಪಭೇದವೆಂದೇ ಹೇಳಬೇಕು. ಸ್ಥಾನಗುಂದದಿಂದ ತುಳುವಕ್ಕೆ 11ನೇ ಶತಮಾನದಲ್ಲಿ ಬಂದಿರಬೇಕಾದ ಬ್ರಾಹ್ಮಣರಿಂದ 'ಗ್ರಾಮ ಪದ್ಧತಿ'ಯಲ್ಲಿ ಮಯೂರ ವರ್ಮನ ಕತೆ, ಹಾಗೂ ಬ್ರಾಹ್ಮಣರಿಗಿತ್ತ ಭೂದಾನ ಇತ್ಯಾದಿ ವಿವರಗಳು ಸೇರಿಸಲ್ಪಟ್ಟುದು ಸತ್ಯವೇ ಆಗಿದೆ.

8) ಉತ್ತರ ಸಹ್ಯಾದ್ರಿಯಲ್ಲಿ ಉಲ್ಲೇಖಿತವಾದ ಪರಶುರಾಮನಿಂದ ನಿರ್ಮಿಸಲ್ಪಟ್ಟ ಏಳು ರಾಷ್ಟ್ರಗಳಲ್ಲಿ 'ಹವಿಗ' ಒಂದಾಗಿದೆ. ಈ ಹವಿಗ ದೇಶವನ್ನು ಹೈಗವೆಂದೂ ಬರೆದಿದೆ. ಈ ದೇಶದ ಮೂಲಕ ಹೆಸರು 'ಪಶುಕ' ಎಂದು ಶುದ್ಧ ಸಂಸ್ಕೃತ ಗ್ರಂಥವಾದ ಪ್ರಪಂಚ ಹೃದಯದಿಂದ ತಿಳಿಯುತ್ತದೆ. ಪಶು ಯಾ ಪಶುಕವೆಂದರೆ ಒಂದೇ ಆಗಿದೆ. ಈ ಪಶುಕ ರೂಪಾಂತರದಿಂದ ಆದ ಪ್ರಭೇದವೇ 'ಹೈಗ'ವಾಗಿರಬೇಕು. 'ಪ'ವು 'ಹ'ವಾಗಿ ಮಾರ್ಪಟ್ಟು ಉಪಯೋಗಿಸಲ್ಪಡುವ ಕ್ರಮ ಪ್ರಾರಂಭವಾದುದು ಕ್ರಿ.ಶ.12ನೆಯ ಶತಮಾನದ ಅನಂತರದಿಂದ ಎಂಬುದಾಗಿ ಭಾಷಾಶಾಸ್ತ್ರಜ್ಞರು ತಿಳಿಸುತ್ತಾರೆ. ಈ ಪಶುಕವೆಂದರೆ ಗೋರಾಷ್ಟ್ರವೇ. 'ಯಾವ ದೇಶದಲ್ಲಿ ದೇವತೆಗಳಿಗೋಸ್ಕರ ವಿಶೇಷವಾಗಿ ಹವಿಸ್ಸು ಕೊಡಲ್ಪಡುತ್ತದೋ ಅದರ ದೆಸೆಯಿಂದ ಹವ್ಯಂವೆಂತೆಂದು ಪ್ರಸಿದ್ಧವಾಗಿ' ಎಂದು ಉತ್ತರ ಸಹ್ಯಾದ್ರಿಯಲ್ಲಿ ಲಿಖಿತವಾಗಿರುವುದು ಅಷ್ಟೊಂದು ಸಮಂಜಸವಾಗಿಲ್ಲ. ಹೈವ, ಹೈಗವೆಂಬುದು ಪಶು ಪಶುಕದ ಹನ್ನೆರಡನೆಯ ಶತಮಾನದ ಅನಂತರದ ರೂಪಾಂತರವೆಂಬುದರಲ್ಲಿ ಸಂದೇಹವಿಲ್ಲ.

9) ಗ್ರಾಮ ಪದ್ಧತಿಯಲ್ಲಿ ಬರುವ ಚೌಟ, ಬಂಗ, ಸಾವಂತ ಅರಸು, ಮನೆತನಗಳು ಚಿಟ್ಟುಪಾಡಿ ಮತ್ತು ನಿಡಂಬೂರು ಬಲ್ಲಾಳರುಗಳ ಪಕ್ಷನಾಥ ಸ್ಥಾನಗಳೂ ಹತ್ತನೆಯ ಶತಮಾನದ ಮುಂದಕ್ಕೆ ಅಸ್ತಿತ್ವಕ್ಕೆ ಬಂದುದೆಂದು ಇತಿಹಾಸವು ಹೇಳುತ್ತದೆ.

10) ಗ್ರಾಮ ಪದ್ಧತಿಯಲ್ಲಿ (ಪುತ್ತಿಗೆ ಪ್ರಭೇದ) ಶಂಕರಾಚಾರ್ಯರಿಗೂ ಮದನಪಂಡಿತರಿಗೂ ಆದ ಚರ್ಚೆಯ ಉಲ್ಲೇಖವಿದೆ. ಇಷ್ಟರ ವರೆಗಿನ ಚಾರಿತ್ರಿಕ ದಾಖಲೆ ಮೇಲೆ ನಿರ್ಧರಿಸಿ ಹೇಳುವುದಾದರೆ ಶಂಕರಾಚಾರ್ಯರ ಕಾಲವು ಕ್ರಿ.ಶ.8ನೆಯ ಶತಮಾನವೆಂದು ಅಂಗೀಕರಿಸಬೇಕು. ಹಾಗಾದರೆ ಈ ಗ್ರಂಥದ ನಿರ್ಮಾಣ ಕಾಲದ ಕೆಳಮಿತಿಯನ್ನು ಕ್ರಿ.ಶ.8ನೆಯ ಶತಮಾನದ ಮಧ್ಯಾವಧಿಗಿಂತ ಇಳಿಸಲು ಸಾಧ್ಯವಿಲ್ಲ. ಅಂತೆಯೇ 'ಬಾರಕನ್ಯಾಪುರ' ಎಂಬ ಶಬ್ದಪ್ರಯೋಗವು ಕ್ರಿ.ಶ.10ನೆಯ ಶತಮಾನದ ಅನಂತರದ್ದೆಂದು ವಿದ್ವಾಂಸರ ಅಭಿಪ್ರಾಯ. ಗ್ರಾಮ ಪದ್ಧತಿಯು ಬಾರಕೂರನ್ನು 'ಬಾರಕನ್ಯಾಪುರ'ವೆಂದು ಹಲವೆಡೆ ಸಂಭೋಧಿಸುತ್ತದೆ.

(ಮುಂದುವರಿಯುವುದು)

## ಮಾಂಗಲ್ಯಂ ತಂತುನಾನೇನ ....

ಕಾಪು ಕರಂದಾಡಿ ಶ್ರೀಮತಿ ಮತ್ತು ಶ್ರೀ ದಿ| ನಾಗರಾಜ ರಾವ್‌ರ ಪುತ್ರ **ಕೃಷ್ಣರಾವ್** (ಕಿಶನ್ ಸ್ಟುಡಿಯೋ ಬಂಟಕಲ್) ಹಾಗೂ **ಪ್ರತಿಮಾ** ಇವರ ವಿವಾಹವು ತಾ.19-07-2010ರಂದು ಮಧ್ವ ಕುಟೀರ, ಬಿಜಾಪುರದಲ್ಲಿ ಜರಗಿತು. ವಿವಾಹದ ಆರತಕ್ಷತೆ ಕಾರ್ಯಕ್ರಮವು ತಾ.25-7-2010ರಂದು ಕಾಪು ಶ್ರೀ ಲಕ್ಷ್ಮಿಜನಾರ್ದನ ದೇವಸ್ಥಾನದ ಸಭಾಭವನ ದಲ್ಲಿ ನೆರವೇರಿತು.

## ನಿಧನ

### ಶ್ರೀಮತಿ ಸುಬ್ಬಮ್ಮ ಯಸ್.ಶರ್ಮ

ಪಣಂಬೂರಿನ ದಿ| ಸದಾಶಿವ ಶರ್ಮರ ಪತ್ನಿ ಶ್ರೀಮತಿ ಸುಬ್ಬಮ್ಮ ಶರ್ಮ (86 ವರ್ಷ) ಇವರು ತಾ.30-6-2010ರಂದು ಉಪ್ಪಿನಂಗಡಿಯಲ್ಲಿರುವ ತಮ್ಮ ಮಗಳ ಸ್ವಗೃಹದಲ್ಲಿ ನಿಧನರಾದರು. ಇವರು ನಾಲ್ವರು ಪುತ್ರಿಯರು, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

### ಶ್ರೀ ಸುರೇಶ್ ಬಿ.ಎಸ್. ಉಜಿರೆ

ಉಜಿರೆ ಪಂಚವಟಿಯಲ್ಲಿ ವಾಸವಾಗಿದ್ದ ಬಿ.ಎಸ್.ಸುರೇಶ್ (58ವರ್ಷ) ರವರು ತಾ.23-6-2010ರಂದು ದೈವಾಧೀನರಾದರು. ಇವರು ಪತ್ನಿ, ಪುತ್ರ ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ. ಇವರು ಬೆಳ್ತಂಗಡಿ ಸ್ಥಾನಿಕ ಸಭಾದಲ್ಲಿ ಸಕ್ರಿಯರಾಗಿದ್ದರು.

ಇವರು ಪ್ರತಿ ವರ್ಷ ಉಡುಪಿಯ ಶ್ರೀಶಾರದಾ ಟ್ರೋಫಿ ಪಂದ್ಯಾಟದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

### ಶ್ರೀಮತಿ ಇಂದಿರಾ ಎಸ್.ರಾವ್

ನಂದಳಿಕೆ ಮೂಡುಮನೆ ಶ್ರೀಶಂಕರರಾಯರ ಪತ್ನಿ ಶ್ರೀಮತಿ ಇಂದಿರಾ ಎಸ್.ರಾವ್ (67 ವರ್ಷ) ರವರು ತಾ.16-7-2010ರಂದು ದೈವಾಧೀನರಾದರು. ಇವರು ಪತಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

## ಹನಿಗವನಗಳು

### ಪತಿ ಉವಾಚ

ಭಾರೀ ಭಾರ್ಯೆಯನ್ನು
ಕರುಣಿಸಿದ ಆ
ವಿಧಿಗೆ ನಾನು ಆಭಾರಿ!
ಹಿಂದೆಲ್ಲಾ ಟಾರು ಕಾಣದ
ರಸ್ತೆಯಲ್ಲಿ ಓಡುತ್ತಿತ್ತು
ನನ್ನ ಗಾಡಿ ಹಾರಿ ಹಾರಿ!
ಆದರೀಗ ಕ್ರಮಿಸಿದ್ದೆ
ತಿಳಿಯುವುದಿಲ್ಲ ದಾರಿ!!

### ಅನಿಸಿಕೆ

'ಮಾತೃದೇವೋಭವ'
ಎನ್ನುವ ಮಗನೆಂದರೆ
ಆಕೆಗೆ ಬಲು ಹರುಷ
ಹಾಗೆನ್ನುವ
ಪತಿಯನ್ನು ಕಂಡರೆ
ಉಕ್ಕಿ ಬರುವುದು ರೋಷ!!

-MNS

### ವಿ(ಜ್ಞಾನ)

ಅಸ್ಥಿತ್ವ ಹುಡುಕ ಹೊರಟರೆ
ಅಳಿಯುವುದೇನು? ಉಳಿಯುವುದೇನು?
ಉಳಿಯುವುದು ಅಳಿಯದು!
ಅಳಿಯುವುದು ಉಳಿಯದು!!
ಅದು ಅಳೆಯಲಾರದ್ದು!!!

### ವ(ಸಂತ)

ಅಂತೆ ಕಂತೆಗಳ ಸಂತೆಯೊಂದಿಗೆ
ನಿನ್ನ ನೀ ಕಳೆದುಕೊಳ್ಳಬೇಡ
ಒನಕೆಯಾದೀತು ಜೋಕೆ!
ಮನಕೆ, ಹೂಬನಕೆ, ನಿನ್ನ ತನಕೆ
ನೀ ಸಂತನಾಗು ವಸಂತನಾಗು!!

### ಒಗಟು

ಜನ-ಗುಣ
ಗುಣ-ಗಣ
ನೀ-ನಿರ್ಗುಣ

- ರಾಜೇಂದ್ರ, ಕೇದಿಗೆ

### ಗಣಪತಿ

ಓಂನಲ್ಲಿ
ಪ್ರಣವ
ರೂಪಿ.
ಆನೆಮುಖದ
ಸ್ವರೂಪಿ
ಭಕ್ತರ-ಭಕ್ತಿಗೆ
ಹ್ಯಾಪಿ
ಇವನೇ ಅಲ್ಲವೆ
ಮಹಾ-ಗಣಪತಿ

### ಮಂಗ

ಪರಸ್ತ್ರೀ
ಸಂಗ
ಪ್ರತಿಷ್ಠೆಗೆ
ಭಂಗ
ಬಟ್ಟಬಯಲಾದರೆ
ಸಿಂಗ ಹೋಗಿ
ಮಂಗ

### ಬಹಿಷ್ಕಾರ

ವೇಶ-ಭೂಷಣ
ನೋಡಿ
ಹಾಕಬೇಕು
ದೊಡ್ಡ ನಮಸ್ಕಾರ
ಮಾಡುವ
ಹೇಸಿಗೆ ಕೆಲಸ
ನೋಡಿ
ಹಾಕಬೇಕು
ಬಹಿಷ್ಕಾರ

### ಕೊನೆ ಇದೆ

ಯಾವುದಕ್ಕೂ
ಒಂದು
ಕೊನೆ ಇದೆ
ಕಾಲ ಬರುವುದಕ್ಕೆ
ಅವಸರವೇಕೇ?
ಬಂದೆ-ಬರುವುದು
ಕಾಯದಿದ್ದರೂ
ಕಾಲ

### ಬೆತ್ತಲು

ಬ್ರಹ್ಮಚರ್ಯ
ಪಾಲಿಸಬೇಕಾದ
ಸ್ವಾಮೀಜಿಗಳ
ರಾಸಲೀಲೆ
ನಡೆದಿದ್ದು
ಕತ್ತಲಲ್ಲಿ
ರಟ್ಟಾದಾಗ
ಸ್ವಾಮೀಜಿಗಳೇ
ನಿಂತರು
ಬಟ್ಟಬಯಲಲ್ಲಿ

### ಆಗ್ರಹ

ಭಯೋತ್ಪಾಕರ
ನಿಗ್ರಹ
ಅದುವೆ ನಮ್ಮೆಲ್ಲರ
ಬದುಕಿನ
ಆಗ್ರಹ

**ಮಾರ್ಪಳ್ಳಿ ಆರ್. ಮಂಜುನಾಥ್**
**ಶಿವಮೊಗ್ಗ**

Rao's 'ಮಾತೃಛಾಯಾ'ರವರ
ಉಡುಪಿ ವಿಶಿಷ್ಟ ರುಚಿಯುಳ್ಳ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪಿಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444

ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.
ಸಂಪರ್ಕಿಸಿರಿ :
ಕೆ. ರಾಮಮೂರ್ತಿ ಭಟ್, ಪುರೋಹಿತರು
ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010

## ತ್ರಿಶೂಲಿನೀ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ

ಬಳ್ಪ, ಸುಳ್ಯ ತಾಲೂಕು, ದ.ಕ. ಜಿಲ್ಲೆ

### ವಿಜ್ಞಾಪನೆ



ಸಮಾಜ ಬಾಂಧವರಲ್ಲಿ ವಿಜ್ಞಾಪನೆಗಳು,

ದ.ಕ. ಜಿಲ್ಲಾ ಸುಳ್ಯ ತಾಲೂಕು ಬಳ್ಪ ಗ್ರಾಮದಲ್ಲಿ ನಮ್ಮ ಸಮಾಜದ ಆಡಳಿತ ಮತ್ತು ಅರ್ಚಕತ್ವದಲ್ಲಿರುವ ಅತೀ ಪುರಾತನವಾದ ಶ್ರೀ ತ್ರಿಶೂಲಿನೀ ಮತ್ತು ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನಗಳು ಜೀರ್ಣೋದ್ಧಾರಗೊಳ್ಳುತ್ತಿದೆ.

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಗಳು ಶೀಘ್ರ ಗತಿಯಲ್ಲಿದ್ದು ಗರ್ಭಗುಡಿ ತೀರ್ಥ ಮಂಟಪಗಳ ಕೆಲಸಗಳು ಮುಕ್ಕಾಲು ಭಾಗ ಪೂರೈಸಿದ್ದು ಮುಂದಿನ ವರ್ಷ ಕುಂಭಾಭಿಷೇಕ ನಡೆಸುವ ಸಂಕಲ್ಪವಿದ್ದು, ರೂ.60 ಲಕ್ಷ ವೆಚ್ಚದ ಸುತ್ತು ಪೌಳಿ, ರಸ್ತೆ, ಭೋಜನ ಶಾಲೆ, ವಸತಿ ಗೃಹ ಇತ್ಯಾದಿ ಕೆಲಸಗಳಿಗೆ ನಮ್ಮ ಸಮಾಜ ಬಾಂಧವರಿಂದ ತನು-ಮನ-ಧನಗಳ ಸಹಕಾರವನ್ನು ನಿರೀಕ್ಷಿಸುತ್ತಿದ್ದೇವೆ. ಈ ಬಗ್ಗೆ ಧನ ಸಹಾಯ ನೀಡಬಯಸುವ ಮಹನೀಯರು ಜೀರ್ಣೋದ್ಧಾರ ಸಮಿತಿ, ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ, ಬಳ್ಪ ಈ ಹೆಸರಲ್ಲಿರುವ ಪಂಜ ಸಿಂಡಿಕೇಟ್ ಬ್ಯಾಂಕ್‌ನ ಎಸ್.ಬಿ. ನಂ.08172200045694 ಈ ಜತೆ ಖಾತೆಗೆ ಹಣವನ್ನು ಪಾವತಿಸಬಹುದು.

- ಅಧ್ಯಕ್ಷರು, ಜೀರ್ಣೋದ್ಧಾರ ಸಮಿತಿ,
ತ್ರಿಶೂಲಿನೀ ಮತ್ತು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ. ಬಳ್ಪ

## ಶ್ರೀಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

### ಪ್ರಕಟಣೆ

2010-11ನೇ ಸಾಲಿಗೆ ಶ್ರೀಸಭೆಯಿಂದ ಕೊಡುವ ವಿದ್ಯಾರ್ಥಿ ವೇತನಕ್ಕೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬರುವ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. ತಾ.31-10-2010ರ ಒಳಗೆ ಶ್ರೀಸಭೆಯ ಕಾರ್ಯದರ್ಶಿಗೆ ತಲುಪುವಂತೆ ಭರ್ತಿಮಾಡಿದ ಅರ್ಜಿಯನ್ನು ಅಂಕಪಟ್ಟಿ ಹಾಗೂ ವಿದ್ಯಾಸಂಸ್ಥೆಯ ಪ್ರಮಾಣ ಪತ್ರದೊಂದಿಗೆ ಸಲ್ಲಿಸಬೇಕು.

-ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ (9243309120)

## ಶ್ರೀಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು


### ಪ್ರಕಟಣೆ

ಡಾ| ದಯಾನಂದ ಎಸ್.ರಾವ್ ಎಜುಕೇಶನಲ್ ಟ್ರಸ್ಟ್ ಮಂಗಳೂರು ಇವರು ದಿ| ರಘುರಾಮರಾವ್ ಹಾಗೂ ದಿ| ಎಚ್. ವಾಸುದೇವ ರಾವ್ ಇವರ ಸ್ಮರಣಾರ್ಥ ಕೊಡುವ ಸಾಲ ವಿದ್ಯಾರ್ಥಿ ವೇತನ ನಿಧಿ ಹಾಗೂ ಶ್ರೀ ಸಭೆಯ ನಿಧಿಯಿಂದ 2010-11ನೇ ಸಾಲಿನಲ್ಲಿ ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣವನ್ನು ಪಡೆಯುವ ನಮ್ಮ ಸಮಾಜದ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬರುವ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಸಾಲ ವಿದ್ಯಾರ್ಥಿ ವೇತನವನ್ನು ಪಡೆಯಲು ಬಿಳಿಹಾಳೆಯಲ್ಲಿ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. ಈ ಅರ್ಜಿಯನ್ನು ಅಂಕಪಟ್ಟಿ ಹಾಗೂ ವಿದ್ಯಾಸಂಸ್ಥೆಯ ದೃಢೀಕೃತ ಪ್ರಮಾಣ ಪತ್ರದೊಂದಿಗೆ ತಾ.31-10-2010ರ ಒಳಗೆ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ.

ಈ ಹಿಂದೆ ಸಾಲವಿದ್ಯಾರ್ಥಿ ವೇತನವನ್ನು ಪಡೆದಿರುವವರು ಶಿಕ್ಷಣವನ್ನು ಮುಂದುವರಿಸಲು 2010-11ನೇ ಸಾಲಿನ ಕಂತನ್ನು ಪಡೆಯಲು ಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ, ಮಂಗಳೂರು (0824-2491895) ಇವರನ್ನು ಸಂಪರ್ಕಿಸಬಹುದು.

-ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ (9243309120)


## ದೇವಿಕೃಪಾ ಏಜೆನ್ಸೀಸ್, ನಂದಿಕೂರು



ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ| ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ಶ್ರೀಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಮಂಗಳೂರು

ಸಮಾಜ ಬಾಂಧವರೇ,

ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವರ್ಷಂಪ್ರತಿಯಂತೆ ಈ ಬಾರಿ ದಿನಾಂಕ 29-08-2010ರಂದು **ಶ್ರೀಕೃಷ್ಣ ಜನ್ಮಾಷ್ಟಮಿ**ಯನ್ನು ವಿವಿಧ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸುತ್ತಿದ್ದೇವೆ.

**ಅಧ್ಯಕ್ಷರು ಮತ್ತು ಸರ್ವಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಬಿಜೈ ರಸ್ತೆ, ಮಂಗಳೂರು.

### ಕಾರ್ಯಕ್ರಮಗಳು

| | | |
|---|---|---|
| ಬೆಳಿಗ್ಗೆ 9-00ರಿಂದ | : | **ವಿಷ್ಣು ಸಹಸ್ರನಾಮ ಪಾರಾಯಣ** |
| 10-00ರಿಂದ | : | **ಮುದ್ದುಕೃಷ್ಣ ವೇಷ ಸ್ಪರ್ಧೆ** (1ರಿಂದ 4 ವರ್ಷದೊಳಗಿನ ವಿಭಾಗ, 4ರಿಂದ 8 ವರ್ಷದೊಳಗಿನ ವಿಭಾಗ, 8ರಿಂದ 12 ವರ್ಷದೊಳಗಿನ ವಿಭಾಗ) **ಯಶೋಧೆ ಸ್ಪರ್ಧೆ** (7ರಿಂದ 12 ವರ್ಷದೊಳಗಿನ ವಿಭಾಗ, 12ರಿಂದ ಮೇಲ್ಪಟ್ಟು) |
| 11-00ರಿಂದ | : | **ಭಗವದ್ಗೀತೆ ಕಂಠಪಾಠ ಸ್ಪರ್ಧೆ** (16 ವರ್ಷದ ಕೆಳಗಿನ ಮಕ್ಕಳಿಗೆ ಧ್ಯಾನ ಶ್ಲೋಕ, 16 ವರ್ಷದ ಮೇಲ್ಪಟ್ಟವರಿಗೆ 15ನೇ ಅಧ್ಯಾಯ) |
| 12-00ರಿಂದ | : | **ಭಕ್ತಿಗೀತೆ ಸ್ಪರ್ಧೆ** (35ನೇ ವರ್ಷ ಮೇಲ್ಪಟ್ಟವರಿಗೆ) **ಮಡಕೆ ಒಡೆಯುವ ಸ್ಪರ್ಧೆ, ಚಕ್ಕುಲಿ ಸಂಖ್ಯೆ ಊಹಿಸುವ ಸ್ಪರ್ಧೆ** (ಮುಕ್ತವಿಭಾಗ) |
| ಮಧ್ಯಾಹ್ನ 1-00ರಿಂದ | : | **ಭೋಜನ** |
| 2-00ರಿಂದ | | **ಸಾಂಸ್ಕೃತಿಕ ಕಾರ್ಯಕ್ರಮಗಳು** |

ವಿ.ಸೂ :
ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ತಮ್ಮ ಹೆಸರನ್ನು ತಾ.25-08-2010ರ ಒಳಗಾಗಿ ನೋಂದಾಯಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಶ್ರೀಮತಿ ಅರುಣಾ ಸೋಮಶೇಖರನ್ : 9880413243**
**ಶ್ರೀ ಶ್ರೀಕಾಂತ ರಾವ್ : 9343361618**
**ಶ್ರೀ ಅನಿಲ್‌ರಾವ್ ಬಿ.ಎಸ್. : 9880037110**

**ತಾ.23-08-2010ರಂದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಬೆಳಿಗ್ಗೆ 6-00ರಿಂದ ಋಗುಪಾಕರ್ಮ ನಡೆಯಲಿದೆ.**

**ತಾ.05-09-2010ರಂದು ಪೂಜ್ಯ ಗುರುಗಳ ಚಾತುರ್ಮಾಸ ಪ್ರಯುಕ್ತ ಶೃಂಗೇರಿ ಪ್ರವಾಸ. ಆಸಕ್ತರು ರೂ.150/- ನೀಡಿ ತಮ್ಮ ಹೆಸರನ್ನು ತಾ.29-08-2010ರ ಒಳಗೆ ನೋಂದಾಯಿಸಬೇಕೆಂದು ವಿನಂತಿಸುತ್ತಿದ್ದೇವೆ. ಮಕ್ಕಳಿಗೆ ಅರ್ಧ ಶುಲ್ಕ.**

## ಏಕಾದಶ ರುದ್ರ

ಶ್ರೀಯುತ ಬಿ. ವಾಸುದೇವರಾವ್ ದಂಪತಿಗಳು ಮತ್ತು ಮಕ್ಕಳು ಶಾರದಾ ದೇವಸ್ಥಾನ ಕುಂಜಿಬೆಟ್ಟು ಇಲ್ಲಿ ದಿನಾಂಕ 23-6-2010ರಂದು ಏಕಾದಶ ರುದ್ರಪೂಜೆ ಪ್ರತಿವರ್ಷದಂತೆ ನೆರವೇರಿಸಿದರು. ಅವರಿಗೆ ಶ್ರೀಶಾರದಾ ಬಳಗವು ಶುಭ ಹಾರೈಸುತ್ತದೆ.

## ವಿದೇಶ ಪ್ರಯಾಣ

ಮಹಾರಾಷ್ಟ್ರದ ಮುಲುಂಡ್‌ನಲ್ಲಿರುವ ಕಡಂದಲೆ ಶ್ರೀಪತಿ ಅಧಿಕಾರಿ ಹಾಗೂ ಶ್ರೀಮತಿ ಗೀತಾ ಅಧಿಕಾರಿ ದಂಪತಿಗಳು ಅಮೇರಿಕಾದ ಪೋರ್ಟ್‌ಲೆಂಡ್‌ನಲ್ಲಿರುವ ತಮ್ಮ ಮಗ ಹಾಗೂ ಕ್ಯಾಲಿಫೋರ್ನಿಯಾದಲ್ಲಿರುವ ತಮ್ಮ ಮಗಳ ಜೊತೆ ವಾಸ್ತವ್ಯಕ್ಕಾಗಿ ತಾ.17-07-2010ರಂದು ವಿದೇಶ ಪ್ರಯಾಣಗೈದಿರುತ್ತಾರೆ

## ವಿಳಾಸ ಬದಲಾವಣೆ

**ಯು. ಸುಬ್ರಾಯ ಶ್ಯಾನುಭಾಗ್**
'ಮಜಲು ಮನೆ', ರಾಯರ ಕೆರೆ
ವಿಷ್ಣುಮೂರ್ತಿ ದೇವಸ್ಥಾನದ ಬಳಿ,
ಪಾದೆಬೆಟ್ಟು ಗ್ರಾಮ, ಪಡುಬಿದ್ರಿ ಅಂಚೆ,
ಉಡುಪಿ ತಾಲೂಕು - 574 111.

**ಶ್ರೀ ಎಮ್. ಆರ್. ಚಂದ್ರಶೇಖರ್**
ಅಬ್ಬಯ್ಯ ರೆಡ್ಡಿ ಬಡಾವಣೆ, 30ನೇ ಮೈನ್,
ಇಂಚರ ಹೊಟೇಲ್ ಹಿಂಬದಿ, ಜೆ.ಪಿ.ನಗರ,
6ನೇ ಫೇಸ್, ಬೆಂಗಳೂರು-560078

## ವಾಸ್ತವ್ಯ ಬದಲಾವಣೆ


ಮಹಾರಾಷ್ಟ್ರದ ತುಳ್‌ಜಾಪುರದಲ್ಲಿ ವಾಸ್ತವ್ಯದಲ್ಲಿದ್ದ ಉಚ್ಚಿಲ ಸುಬ್ರಾಯ ಶ್ಯಾನುಭಾಗ್ ಹಾಗೂ ಸುಮಿತ್ರ ಎಸ್. ಶ್ಯಾನುಭಾಗ್ ದಂಪತಿಗಳು ಪಡುಬಿದ್ರಿ ಪಾದೆಬೆಟ್ಟು ಗ್ರಾಮದ ವಿಷ್ಣುಮೂರ್ತಿ ದೇವಸ್ಥಾನದ ಬಳಿ ನೂತನ ಮನೆಗೆ ವಾಸ್ತವ್ಯವನ್ನು ಬದಲಾಯಿಸಿದ್ದಾರೆ.


## ರಾಮಾ ಆಟೋಮೊಬೈಲ್ಸ್


ಮಾರುತಿ ವಾಹನ ತಜ್ಞರು

ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.

**ಫೋನ್ : 2454355, ಮೊಬೈಲ್ : 94485 45702**



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



## ಅಭಿನಂದನೆ



**ಡಾ। ಪ್ರಶಾಂತ್ ಎ.ಎಸ್.**

ವೈದ್ಯರತ್ನಂ ಔಷಧಶಾಲಾ ತ್ರಿಶೂರ್, ಕೇರಳ, ಈ ಸಂಸ್ಥೆಯಿಂದ ಅಖಿಲಭಾರತ ಮಟ್ಟದಲ್ಲಿ ಆಯುರ್ವೇದ ವಿಷಯಕ್ಕೆ ಸಂಬಂಧಿಸಿದ ಸಂಶೋಧನೆ, ಚಿಕಿತ್ಸೆ ಮತ್ತು ಅಧ್ಯಯನಕ್ಕಾಗಿ ಕೊಡಲ್ಪಡುವ ಪ್ರಶಸ್ತಿ ಮತ್ತು ಗೌರವ ಡಾ। ಪ್ರಶಾಂತ್ ಎ.ಎಸ್., ಪ್ರಾಧ್ಯಾಪಕರು, ಆಯುರ್ವೇದ ಮಹಾವಿದ್ಯಾಲಯ ಹುಬ್ಬಳ್ಳಿ ಇವರಿಗೆ ಲಭಿಸಿರುತ್ತದೆ. ವೈದ್ಯರತ್ನಂ ನೀಲಕಂಠ ಮೂಸ್ ಪಾರಿತೋಷಕವನ್ನು ಶ್ರೀ ವಲಯಾರ್ ರವಿ, ಸಾಗರೋತ್ತರ ವ್ಯವಹಾರಗಳ ಸಚಿವರು, ಭಾರತ ಸರ್ಕಾರ ಇವರು ತ್ರಿಶೂರ್‌ನಲ್ಲಿ ಪ್ರದಾನ ಮಾಡಲಿರುವರು. ಡಾ। ಪ್ರಶಾಂತ್ ಎ.ಎಸ್. ಇವರಿಗೆ ಪುರಸ್ಕಾರ ಬಂದಿರುವುದಕ್ಕೆ ಆಯುರ್ವೇದ ಮಹಾವಿದ್ಯಾಲಯ ಕಾರ್ಯ ಸಮಿತಿ, ಪ್ರಾಚಾರ್ಯರು, ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿರುತ್ತಾರೆ. ಡಾ। ಪ್ರಶಾಂತ್‌ರವರಿಗೆ ಶಾರದಾ ಬಳಗದ ಅಭಿನಂದನೆಗಳು.




**ಕು। ಅನುರಾಧ**

2009-10ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಕು। ಅನುರಾಧ 583 ಅಂಕಗಳನ್ನು ಗಳಿಸಿ (97%) ವಿಶಿಷ್ಠ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಇವಳು ಭೌತಶಾಸ್ತ್ರದಲ್ಲಿ 98, ರಸಾಯನ ಶಾಸ್ತ್ರದಲ್ಲಿ 100, ಗಣಿತದಲ್ಲಿ 100 ಮತ್ತು ಕಂಪ್ಯೂಟರ್ ಸೈಯನ್ಸ್‌ನಲ್ಲಿ 100 ಅಂಕಗಳನ್ನು ಗಳಿಸಿದ್ದಾಳೆ. ಕು। ಅನುರಾಧ ನಕ್ರೆಯ ಶಿವರಾವ್ ಮತ್ತು ಶ್ರೀಮತಿ ಸೀತಾರತ್ನ ದಂಪತಿಗಳ ಪುತ್ರಿ ಹಾಗೂ ಮೂಡಬಿದ್ರೆಯ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ. ಈಕೆಯ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಆದಿತ್ಯ ರಾವ್**

ಕೇರಳದ ಕಣ್ಣಾನೂರಿನಲ್ಲಿರುವ ಶ್ರೀಮತಿ ಸುಚೇತ ಮತ್ತು ನೇತ್ರತಜ್ಞ ಡಾ। ಆರೂರು ಲಕ್ಷ್ಮೀನಾರಾಯಣ ರಾವ್ ಅವರ ಪುತ್ರ ಆದಿತ್ಯ ರಾವ್ (ಬಿ.ಟೆಕ್) ಜುಲೈ 6ರಿಂದ 10ರ ವರೆಗೆ ಕೆನಡಾದ ವಿಷ್ಟ್ಲೆರ್‌ನಲ್ಲಿ ನಡೆಯುತ್ತಿರುವ ಮೊಜಿಲ್ಲಾ ಸಮಿಟ್ 2010ರಲ್ಲಿ ಭಾಗವಹಿಸಲು ಭಾರತದಿಂದ ಆಹ್ವಾನಿಸಲಾದ 9 ಮಂದಿಯಲ್ಲಿ ಒಬ್ಬರಾಗಿ ತೆರಳಿರುತ್ತಾರೆ. ಅದಲ್ಲದೆ ಅವರು ಗೂಗಲ್ ಸಮ್ಮರ್ ಆಫ್ ಕೋಡ್ 3 ತಿಂಗಳ ಆನ್‌ಲೈನ್ ಪ್ರಾಜೆಕ್ಟ್‌ಗೂ ಆಯ್ಕೆಯಾಗಿರುತ್ತಾರೆ. ಇವರು ಇನ್ಫೋಸಿಸ್‌ನಲ್ಲಿ ಉದ್ಯೋಗವನ್ನು ಪಡೆದಿರುತ್ತಾರೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಚಿ। ಸಿದ್ಧಾಂಥ ಕೆ. ರಾವ್**

ಮಹಾರಾಷ್ಟ್ರದ ಲಾತೂರಿನಲ್ಲಿ ಹೋಟೆಲ್ ಉದ್ಯಮ ನಡೆಸುತ್ತಿರುವ ಬೆಳ್ಮಣ್ಣು ಶ್ರೀ ಆನಂದ್ರಾವ್ ಮತ್ತು ಶ್ರೀಮತಿ ಅನಸೂಯಾರವರ ಮೊಮ್ಮಗ ಚಿ। ಸಿದ್ಧಾಂಥ ಕೆ. ರಾವ್ (ಶ್ರೀ ಕೃಷ್ಣ ರಾವ್ ಮತ್ತು ಶ್ರೀಮತಿ ವಂದನಾರವರ ಪುತ್ರ) ಇವನು ಕಳೆದ ಮಾರ್ಚ್ 2010ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 550ರಲ್ಲಿ 527 ಅಂಕಗಳನ್ನು ಪಡೆದು (ಶೇಕಡಾ 95.82) ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾನೆ. ಇವನ ಸಾಧನೆಗೆ ಶ್ರೀಶಾರಾ ಬಳಗದ ಅಭಿನಂದನೆಗಳು.

## ಬ್ರಹ್ಮೋಪದೇಶ

**ಚಿ। ರೋಹನ್**

ತಾ.04-07-2010ರಂದು ಶ್ರೀಮತಿ ಮಂಗಳ ಮತ್ತು ಶ್ರೀ ಸುಬ್ರಹ್ಮಣ್ಯ ರಾವ್ ಇವರ ಪುತ್ರ ಚಿ। ರೋಹನ್‌ನಿಗೆ ಉಡುಪಿ ಕಿನ್ನಿಮೂಲ್ಕಿಯ ಶ್ರೀ ವೀರಭದ್ರ ಕಲಾಭವನದಲ್ಲಿ ಬ್ರಹ್ಮೋಪದೇಶ ನೆರವೇರಿತು.



## ವಿದೇಶ ಪ್ರಯಾಣ - ಶ್ರೀಮತಿ ಸ್ಮಿತಾ ಜ್ಯೋತಿ ಪ್ರಕಾಶ ರಾವ್

ಉಡುಪಿ ಅಂಬಲಪಾಡಿಯ ಶ್ರೀಮತಿ ಇಂದಿರಾ ಹಾಗೂ ಶ್ರೀ ಬಿ. ಕೃಷ್ಣಮೂರ್ತಿರಾವ್ ದಂಪತಿಗಳ ಪುತ್ರಿ ಶ್ರೀಮತಿ ಸ್ಮಿತಾ ಜ್ಯೋತಿ ಪ್ರಕಾಶ ರಾವ್ (ಶ್ರೀಮತಿ ವಿಜಯಾ ಮತ್ತು ಟಿ. ಜಯರಾಮರಾವ್, ಬೆಂಗಳೂರು ಇವರ ಸೊಸೆ) ತಾ.29-07-2010 ರಂದು ಬೆಂಗಳೂರಿನಿಂದ ಅಮೇರಿಕಾದ ಸಿಯಟೆಲ್ ಪ್ರದೇಶಕ್ಕೆ ಪತಿ ಜ್ಯೋತಿಪ್ರಕಾಶರೊಂದಿಗೆ ವಾಸ್ತವ್ಯಕ್ಕೆ ಪ್ರಯಾಣ ಬೆಳೆಸಿದ್ದಾರೆ. ಅವರ ಮುಂದಿನ ಬದುಕು ಸುಖಮಯವಾಗಲೆಂದು ಶ್ರೀಶಾರದಾ ಶುಭ ಹಾರೈಸುತ್ತದೆ.

## ಗುಮಾಸ್ತ ಹುದ್ದೆ-ಅರ್ಜಿ ಆಹ್ವಾನ

ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಕುಂಜಿಬೆಟ್ಟು ಇವರು ನಮ್ಮ ಸಮಾಜದವರಿಂದ ಗುಮಾಸ್ತ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದಾರೆ. ವಿದ್ಯಾರ್ಹತೆ ಕನಿಷ್ಠ ಎಸ್.ಎಸ್.ಎಲ್.ಸಿ. ಆಗಿದ್ದು ಕಂಪ್ಯೂಟರ್ ಜ್ಞಾನವಿದ್ದರೆ ಉತ್ತಮ. ಆರಂಭಿಕ ರೂ.3,000/- ವೇತನವಿದ್ದು ನಿವೃತ್ತರೂ ಅರ್ಜಿ ಸಲ್ಲಿಸಬಹುದಾಗಿದೆ.

## ಶ್ರೀಶಾರದಾ ಮಂಟಪದಲ್ಲಿ ಹೂವಿನ ಪೂಜೆ

ಮಹಿಳಾ ವೇದಿಕೆಯ ವತಿಯಿಂದ ಸೋಣ ಶುಕ್ರವಾರದಂದು (ತಾ.10-9-2010) ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ಹೂವಿನಪೂಜೆಯು ಜರಗಲಿರುವುದು. ಭಕ್ತಬಾಂಧವರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ವಿನಂತಿ.

## ಸಿಂಹ ಮಾಸ ವಿಶೇಷ ದಿನಗಳು

| | |
|---|---|
| 16-08-2010 | ಸಿಂಹ ಸಂಕ್ರಮಣ |
| 20-08-2010 | ವರಮಹಾಲಕ್ಷ್ಮೀ ವ್ರತ ಸರ್ವೇಕಾದಶೀ |
| 21-08-2010 | ಪ್ರದೋಷಃ |
| 23-08-2010 | ಋಗುಪಾಕರ್ಮ |
| 24-08-2010 | ಪೂರ್ಣಿಮಾ |
| 28-08-2010 | ಸಂಕಷ್ಟಹರ ಚತುರ್ಥಿ ಚಂದ್ರೋದಯ ಘಂಟೆ ರಾತ್ರಿ 9-08ಕ್ಕೆ |
| 30-08-2010 | ಮಳೆನಕ್ಷತ್ರ ಪೂರ್ವಾಭಾದ್ರ ಪ್ರಾರಂಭ |
| 01-09-2010 | ಶ್ರೀಕೃಷ್ಣ ಜನ್ಮಾಷ್ಟಮಿ |
| 04-09-2010 | ಸ್ಮಾರ್ತೈಕಾದಶೀ |
| 06-09-2010 | ಪ್ರದೋಷಃ |
| 08-09-2010 | ಅಮಾವಾಸ್ಯೆ |
| 10-09-2010 | ಗೌರೀ ತೃತೀಯಾ |
| 11-09-2010 | ಗಣೇಶ ಚತುರ್ಥೀ |
| 13-09-2010 | ಮಳೆನಕ್ಷತ್ರ, ಉತ್ತರಾಭಾದ್ರ ಪ್ರಾರಂಭ |
| 16-09-2010 | ಕನ್ಯಾ ಸಂಕ್ರಮಣ |

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ಗಾಯ್ಟರ್ (thyroid enlargement) ಹೇಗೆ ಉಂಟಾಗುತ್ತದೆ? ಈ ಖಾಯಿಲೆಯ ಚಿಕಿತ್ಸೆ ಏನು?** **ಡಾ। ವೈ. ಸುದರ್ಶನ ರಾವ್**

**ಉತ್ತರ :** ಥೈರಾಯ್ಡ್ ಗ್ರಂಥಿಯು ಕುತ್ತಿಗೆಯ ಎದುರು ಭಾಗದಲ್ಲಿ ಸ್ವಲ್ಪ ಕೆಳಗೆ, ಶ್ವಾಸನಾಳದ ಇಕ್ಕೆಲಗಳಲ್ಲಿ "U" ಆಕಾರದಲ್ಲಿ ಇರುವ ಒಂದು ನಿರ್ನಾಳ ಗ್ರಂಥಿ. ಇದು ಥೈರೋಕ್ಸಿನ್ ಎಂಬ ಹಾರ್ಮೋನನ್ನು ಉತ್ಪತ್ತಿ ಮಾಡುತ್ತದೆ. ಥೈರೋಕ್ಸಿನ್ ಹಾರ್ಮೋನ್ ದೇಹದ ಎಲ್ಲಾ ಅಂಗಾಂಗಳ ಸಹಜ ಬೆಳವಣಿಗೆಗೂ ಹಾಗೂ ಅವುಗಳ ಕಾರ್ಯನಿರ್ವಹಣೆಗೂ ಅತೀ ಅಗತ್ಯವಾದ ಹಾರ್ಮೋನ್. ಒಂದು ವೇಳೆ ಈ ಹಾರ್ಮೋನ್‌ನ ಕೊರತೆ ಬಾಲ್ಯಾವಸ್ಥೆಯಲ್ಲಿ ಉಂಟಾದರೆ ರೋಗಿಯು ಎಷ್ಟು ವಯಸ್ಸಾದರೂ ಪ್ರಾಯಕ್ಕೆ ತಕ್ಕ ಬೆಳವಣಿಗೆಯಿಲ್ಲದೆ ಮಗುವಿನಂತೆ ಕಾಣಿಸುವನು. ಅದೇ ಈ ಹಾರ್ಮೋನಿನ ಕೊರತೆ ದೊಡ್ಡವರಲ್ಲಿ ಉಂಟಾದರೆ ದೇಹದ ಎಲ್ಲಾ ಅಂಗಾಂಗಗಳ ಕಾರ್ಯನಿರ್ವಹಣೆ ನಿಧಾನವಾಗುತ್ತದೆ. ಅದೇ ರೀತಿ ಈ ಹಾರ್ಮೋನಿನ ಅಧಿಕ ಸ್ರಾವದಿಂದ ದೇಹದಲ್ಲಿ ಇದಕ್ಕೆ ವಿರುದ್ಧವಾದ ಪರಿಣಾಮ ಕಾಣಿಸುತ್ತದೆ.

ಥೈರಾಯ್ಡ್ ಗ್ರಂಥಿಯು ಸಾಮಾನ್ಯವಾಗಿ ಎಂಟು ಗ್ರಾಂನಷ್ಟು ಗಾತ್ರವಿದ್ದು ಕುತ್ತಿಗೆಯ ಮಾಂಸದೊಳಗೆ ಹುದುಗಿಕೊಂಡಿರುವುದರಿಂದ ಹೊರಗಿನಿಂದ ಕಾಣಿಸುವುದಿಲ್ಲ. ಒಂದು ವೇಳೆ ಈ ಗ್ರಂಥಿಯು ಈ ಗಾತ್ರಕ್ಕಿಂತ ದೊಡ್ಡದಾಗಿ ಬೆಳೆದರೆ ಕುತ್ತಿಗೆಯ ಮುಂಭಾಗದಲ್ಲಿ "U" ಆಕಾರದಲ್ಲಿ ಕಾಣಿಸಲಾರಂಭಿಸುತ್ತದೆ. ಆಗ ಈ ಖಾಯಿಲೆಯನ್ನು "ಗಾಯ್ಟರ್" ಎಂದು ಕರೆಯುವರು. ಬೆಳೆಯುತ್ತಿರುವ ಮಕ್ಕಳಲ್ಲಿ, ಗರ್ಭಿಣಿಯರಲ್ಲಿ, ಹಾಲೂಡಿಸುವ ತಾಯಂದಿರಲ್ಲಿ ಈ ಹಾರ್ಮೋನ್ ಹೆಚ್ಚು ಪ್ರಮಾಣದಲ್ಲಿ ದೇಹಕ್ಕೆ ಬೇಕಾಗುವುದರಿಂದ ಅದನ್ನು ಉತ್ಪಾದಿಸಲು ಥೈರೋಯ್ಡ್ ಗ್ರಂಥಿಯು ಗಾತ್ರದಲ್ಲಿ ದೊಡ್ಡದಾದರೆ ಅದನ್ನು "ಫಿಸಿಯಾಲಾಜಿಕಲ್ ಗಾಯ್ಟರ್" ಎನ್ನುವರು. ಥೈರೋಕ್ಸಿನ್ ಹಾರ್ಮೋನಿನ ಗುಳಿಗೆಗಳನ್ನು ಆರಂಭದಲ್ಲೇ ನೀಡಿದರೆ ಥೈರೋಯ್ಡ್ ಗ್ರಂಥಿಯು ಈ ಕಾರಣಕ್ಕಾಗಿ ಬೆಳೆಯುವುದನ್ನು ತಡೆಯಬಹುದು. ಆಹಾರದಲ್ಲಿ ಅಯೋಡಿನ್ ಲವಣದ ಕೊರತೆ ಗಾಯ್ಟರ್ ಖಾಯಿಲೆ ಬರಲು ಇನ್ನೊಂದು ಸಾಮಾನ್ಯ ಕಾರಣ. ಅಯೋಡಿನ್ ಲವಣವು ಥೈರೋಯ್ಡ್ ಹಾರ್ಮೋನಿನ ಉತ್ಪಾದನೆಗೆ ಅತೀ ಅಗತ್ಯವಾದುದರಿಂದ ಆಹಾರದಲ್ಲಿ ಇದರ ಕೊರತೆಯಿದ್ದಾಗ ಥೈರೋಯ್ಡ್ ಗ್ರಂಥಿಯಿಂದ ಹಾರ್ಮೋನ್ ಉತ್ಪಾದನೆ ಕುಂಠಿತವಾಗಿ ರಕ್ತದಲ್ಲಿ ಥೈರೋಕ್ಸಿನ್ ಹಾರ್ಮೋನಿನ ಅಂಶ ಕಡಿಮೆಯಾಗುತ್ತದೆ. ಇದನ್ನು ಮೆದುಳು ಗಮನಿಸಿ ಥೈರೋಯ್ಡ್ ಗ್ರಂಥಿಗೆ ಹೆಚ್ಚು ಹಾರ್ಮೋನ್ ಉತ್ಪಾದಿಸುವಂತೆ ಸೂಚನೆ ರವಾನಿಸುತ್ತದೆ. ಅದಕ್ಕನುಗುಣವಾಗಿ ಈ ಗ್ರಂಥಿಯು ಗಾತ್ರದಲ್ಲಿ ಬೆಳೆದು ಹೆಚ್ಚು ಹಾರ್ಮೋನನ್ನು ಉತ್ಪಾದಿಸಲು ಪ್ರಯತ್ನಿಸುತ್ತದೆ. ಇದನ್ನು "ಅಯೋಡಿನ್ ಕೊರತೆಯಿಂದ ಬರುವ ಗಾಯ್ಟರ್" ಎನ್ನುವರು. ಆಹಾರದಲ್ಲಿ ಅಯೋಡಿನ್ ಇರುವ ಉಪ್ಪನ್ನೇ ಬಳಸುವ ಮೂಲಕ ಅಯೋಡಿನ್‌ನ ಕೊರತೆಯನ್ನು ಆರಂಭದಲ್ಲೇ ನೀಗಿಸಿದರೆ ಇದನ್ನು ಗುಣಪಡಿಸಬಹುದು. ಆದರೆ ಈ ಎರಡು ಕಾರಣಗಳಿಂದಾಗಿ ಬೆಳೆಯುತ್ತಿರುವ ಗಾಯ್ಟರ್‌ಗೆ ತಕ್ಕ ಔಷಧಿ ಆರಂಭದಲ್ಲೇ ಮಾಡದಿದ್ದರೆ ಮುಂದೆ ಇದು ಇನ್ನಷ್ಟು ಬೆಳೆದು ಅದರಲ್ಲಿ ಸಣ್ಣ ಸಣ್ಣ ಗಂಟುಗಳಾಗುವುದು. ಇದನ್ನು "ಮಲ್ಟಿ ನೊಡ್ಯುಲಾರ್ ಗಾಯ್ಟರ್" ಎಂದು ಕರೆಯುವರು. ಈಗ ಈ ಕಾಯಿಲೆಯನ್ನು ಶಸ್ತ್ರ ಚಿಕಿತ್ಸೆಯ ವಿನಃ ಔಷಧಿಯಿಂದ ಗುಣಪಡಿಸಲು ಸಾಧ್ಯವಿಲ್ಲ.

ಮೇಲೆ ಹೇಳಿದಕ್ಕಿಂತ ಬೇರೆಯಾದ ಕೆಲವು ಕಾರಣಗಳಿಂದ ಥೈರೋಯ್ಡ್ ಗ್ರಂಥಿ ಬೆಳೆದು ಹಾರ್ಮೋನನ್ನು ಅಧಿಕವಾಗಿ ಉತ್ಪತ್ತಿ ಮಾಡಿದರೆ ಅದನ್ನು ಟಾಕ್ಸಿಕ್ ಗಾಯ್ಟರ್ (toxic goiter) ಎಂದು ಕರೆಯುವರು. ಇವರಲ್ಲಿ ಥೈರೋಯ್ಡ್ ಗ್ರಂಥಿಯ ಊತದೊಂದಿಗೆ ರಕ್ತದಲ್ಲಿ ಅಧಿಕ ಪ್ರಮಾಣದಲ್ಲಿ ಥೈರೋಕ್ಸಿನ್ ಹಾರ್ಮೋನ್ ಇರುವುದರಿಂದ ಅದರ ಅಡ್ಡ ಪರಿಣಾಮಗಳಾದ ಹೃದಯದ ಬಡಿತ ಹೆಚ್ಚಿರುವುದು. ಮಾನಸಿಕವಾಗಿ ಉದ್ವಿಗ್ನತೆ, ಪದೇ ಪದೇ ಭೇದಿಯಾಗುವುದು, ಹಸಿವು ಹೆಚ್ಚಾಗುವುದು, ಹೆಚ್ಚು ತಿನ್ನುತ್ತಿದ್ದರೂ ತೂಕ ಕಡಿಮೆಯಾಗುವುದು, ಮುಟ್ಟಿನ ಸಮಯದಲ್ಲಿ ಅಧಿಕ ರಕ್ತ ಸ್ರಾವವಾಗುವುದು ಇತ್ಯಾದಿ ಚಿಹ್ನೆಗಳಿರುತ್ತವೆ. ಈ ಖಾಯಿಲೆಯನ್ನು ಶಸ್ತ್ರಚಿಕಿತ್ಸೆ ಅಥವಾ ರೇಡಿಯೋ ಅಯೋಡಿನ್ ಎಂಬ ಔಷಧಿಯ ಮೂಲಕ ಗುಣಪಡಿಸಿಕೊಳ್ಳಬಹುದು.

ಕೆಲವೊಮ್ಮೆ ಥೈರೋಯ್ಡ್ ಗ್ರಂಥಿಯು ಕಡಿಮೆ ಕಾರ್ಯನಿರ್ವಹಿಸುವುದುಂಟು. ಆಗ ರಕ್ತದಲ್ಲಿ ಥೈರೋಕ್ಸಿನ್ ಹಾರ್ಮೋನಿನ ಕೊರತೆ ಉಂಟಾಗುತ್ತದೆ. ಈ ಪರಿಸ್ಥಿತಿಯನ್ನು "ಹೈಪೋಥೈರೋಯ್ಡ್" ಎಂದು ಕರೆಯುತ್ತಾರೆ. ಇಂಥಹವರಲ್ಲಿ ಥೈರೋಯ್ಡ್ ಗ್ರಂಥಿಯ ಊತದೊಂದಿಗೆ ಹೃದಯ ಬಡಿತ ನಿಧಾನವಾಗುವುದು. ಮೆದುಳು ಮತ್ತು ದೇಹ ಚುರುಕುತನ ಕಳೆದುಕೊಂಡು ಪ್ರಶ್ನೆಗೆ ಉತ್ತರಗಳು ನಿಧಾನವಾಗಿ ಹೊಳೆಯುವುದು. ನಾಲಗೆ ತೊದಲುವುದು, ಕೈಕಾಲುಗಳು ಮತ್ತು ಮುಖ ಊದಿಕೊಳ್ಳುವುದೇ ಇತ್ಯಾದಿ ಚಿಹ್ನೆಗಳಿರುತ್ತವೆ. ಥೈರೋಯ್ಡ್ ಹಾರ್ಮೋನನ್ನು ಗುಳಿಗೆಯ ರೂಪದಲ್ಲಿ ಕೊಡುವುದರ ಮೂಲಕ ಈ ಖಾಯಿಲೆಯನ್ನು ಗುಣಪಡಿಸಬಹುದು. ಇನ್ನು ಕೆಲವರಲ್ಲಿ ಥೈರೋಯ್ಡ್ ಗ್ರಂಥಿಯು ದುರ್ಮಾಂಸ ಮತ್ತು ಕ್ಯಾನ್ಸರ್ ಖಾಯಿಲೆಯಿಂದಲೂ ದೊಡ್ಡದಾಗಿ ಕಾಣಿಸಬಹುದು. ವಿಶೇಷವೆಂದರೆ ಥೈರೋಯ್ಡ್‌ನ ಕಾನ್ಸರ್ ವಯಸ್ಸಾದವರಲ್ಲೆಷ್ಟು ಸಾಮಾನ್ಯವೋ ಅಷ್ಟೇ ಮಕ್ಕಳಲ್ಲೂ ಸಾಮಾನ್ಯ. ಹಾಗಾಗಿ ಮಕ್ಕಳಲ್ಲಿ ಗಾಯ್ಟರ್ ಇದ್ದರೆ "ಪಿಸಿಯೋಲಾಜಿಕಲ್ ಗಾಯ್ಟರ್" ಎಂದು ಚಿಕಿತ್ಸೆ ನೀಡುವ ಮುನ್ನ ಈ ಖಾಯಿಲೆ ಅಲ್ಲವೆಂದು ಖಚಿತಪಡಿಸಿಕೊಳ್ಳುವುದು ಅಗತ್ಯ. ಕೆಲವೇ ದಿನಗಳ ಅಥವಾ ತಿಂಗಳುಗಳ ಅಂತರದಲ್ಲಿ ಥೈರೋಯ್ಡ್ ವೇಗವಾಗಿ ಬೆಳೆದು ದೊಡ್ಡದಾಗಿ ಕಾಣಿಸುವುದು. "U" ಆಕಾರದಲ್ಲಿರುವ ಥೈರೋಯ್ಡ್‌ನ ಒಂದು ಭಾಗ ಮಾತ್ರ ದೊಡ್ಡದಾಗಿರುವುದು, ಒತ್ತಿ ನೋಡುವಾಗ ಕಲ್ಲಿನಂತೆ ಗಟ್ಟಿಯಾಗಿರುವುದು, ಸ್ವರದಲ್ಲಿ ಬದಲಾವಣೆ, ನುಂಗಲು ಕಷ್ಟವಾಗುವುದು ಇವುಗಳೆಲ್ಲ ಥೈರೋಯ್ಡ್ ಗ್ರಂಥಿಯ ಕ್ಯಾನ್ಸರ್‌ನ ಸೂಚನೆಗಳು. ಇದಕ್ಕೆ ಆದಷ್ಟು ಬೇಗನೆ ಶಸ್ತ್ರ ಚಿಕಿತ್ಸೆಯ ಮುಖಾಂತರ ಥೈರೋಯ್ಡ್ ಗ್ರಂಥಿಯನ್ನು ತೆಗೆಯುವುದೇ ಸರಿಯಾದ ಚಿಕಿತ್ಸೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2010-2011ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು. ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.15-09-2010ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.60,000/-ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.20-9-2010ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

ವಿದ್ಯಾರ್ಥಿವೇತನ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಮೊಬಲಗನ್ನು ಹಿಂದಿನ ವರ್ಷದಂತೆಯೇ ಎಂ.ಓ. ಮೂಲಕ ಕಳುಹಿಸಲಾಗುವುದು.

– ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 101.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನ

ಪ್ರತಿ ವರ್ಷ ನಮ್ಮ ಸಮಾಜದ ಉನ್ನತ ವ್ಯಾಸಂಗಕ್ಕೆ ವಿದ್ಯಾರ್ಥಿಗಳಿಗೆ ಸಾಲ ವಿದ್ಯಾರ್ಥಿ ವೇತನ ನೀಡಲು ಸಹಕರಿಸುತ್ತಿರುವ ಸನ್ಮಾನ್ಯ ಡಾ| ದಯಾನಂದ ಎಸ್. ರಾವ್‌ರವರು 2010-11ನೇ ಸಾಲಿಗೆ ಸಾಲ ವಿದ್ಯಾರ್ಥಿ ವೇತನ ನೀಡುವುದಕ್ಕಾಗಿ ನಮ್ಮ ಸಂಘಕ್ಕೆ ರೂ.3,00,001/- ದೇಣಿಗೆಯನ್ನು ನೀಡಿದ್ದಾರೆ. ಅವರ ಈ ಕೊಡುಗೆಯನ್ನು ಹೃತ್ಪೂರ್ವಕವಾಗಿ ಸ್ವೀಕರಿಸಿ, ಅವರಿಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇವೆ ಹಾಗೂ ಅವರ ಕುಟುಂಬದವರೆಲ್ಲರಿಗೆ ಶ್ರೀಶಾರದೆಯು ಸನ್ಮಂಗಲವನ್ನುಂಟುಮಾಡಲಿ ಎಂದು ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು ಮತ್ತು ಆಡಳಿತ ಮಂಡಳಿ,** ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754

## ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ

## ಉದಯಚಂದ್ರ ಪ್ರತಿಭಾ ಪುರಸ್ಕಾರ 2009-10

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2009-10ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 25-09-2010ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%★ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ‍್ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**– ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ‍್ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-00ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.28-08-2010) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.11-09-2010 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ಶುದ್ಧ ಪಂಚಮಿಯಂದು (ತಾ.12-09-2010) ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.10-09-2010 ರಂದು ಮಹಿಳಾ ವೇದಿಕೆಯ ವತಿಯಿಂದ ಹೂವಿನ ಪೂಜೆ ಸೇವೆ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಚಾತುರ್ಮಾಸದಲ್ಲಿ ಗುರುಗಳ ಭೇಟಿ

**ನಮ್ಮ ಕುಲಗುರುಗಳಾದ ದಕ್ಷಿಣಾಮ್ನಾಯ ಶ್ರೀ ಕ್ಷೇತ್ರ ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ದರ್ಶನ ಪಡೆಯಲು ಈ ವರ್ಷ ಚಾತುರ್ಮಾಸದ ಅವಧಿಯಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಸಮಾಜ ಬಾಂಧವರು ಜೊತೆಯಾಗಿ ಸೇರಿ ಗುರುಗಳ ಆಶೀರ್ವಾದ ಪಡೆಯಲು ಉದ್ದೇಶಿಸಲಾಗಿದೆ. ಕಳೆದ 26 ವರ್ಷಗಳಿಂದ ಸಮಾಜಬಾಂಧವರು ಒಂದುಗೂಡಿ ಗುರುಗಳ ಭೇಟಿಗಾಗಿ ಹೋಗುತ್ತಿದ್ದೇವೆ.**

**ಶ್ರೀ ಗುರುಗಳು ಈ ಹಿಂದೆ ನೀಡಿದ ಆದೇಶದಂತೆ ಈ ವರ್ಷ ತಾ.05-09-2010ರಂದು ಶ್ರೀ ಗುರುಗಳ ಆಶೀರ್ವಾದಕ್ಕಾಗಿ ತೆರಳುವುದೆಂದು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ನಿರ್ಧರಿಸಿದೆ. ಅದಕ್ಕಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಬೇಕೆಂದು ಅಪೇಕ್ಷಿಸಲಾಗಿದೆ. ಆಸಕ್ತರು ಶಾರದಾ ಮಂಟಪದ ಮೆನೇಜರ್ (0820-2520754), ಕಾರ್ಯದರ್ಶಿ ಬಿ. ಕೃಷ್ಣಮೂರ್ತಿ ರಾವ್ (9663049590), ಜತೆ ಕಾರ್ಯದರ್ಶಿ ಮಂಜುನಾಥ ಹೆಬ್ಬಾರ್ (9611099894) ಇವರಲ್ಲಿ ರೂ.200/-ನ್ನು ನೀಡಿ ತಾ.31-08-2010ರೊಳಗೆ ಹೆಸರನ್ನು ನೋಂದಾಯಿಸಬೇಕಾಗಿ ವಿನಂತಿ. ಆಸಕ್ತರು ಹೊರೆಕಾಣಿಕೆಯನ್ನು ಸಲ್ಲಿಸಬಹುದು.**

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ) ಉಡುಪಿ

**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರೋಡ್ ಉಡುಪಿ -1. ದೂರವಾಣಿ : 2522408**

### ಸನ್ಮಾನ್ಯ ಸದಸ್ಯರ ಅವಗಾಹನೆಗೆ

1. **2009-2010ನೇ ವರ್ಷದ ಲಾಭಾಂಶ (ಪಾಲು ಮುನಾಫೆ) ವಿತರಣೆ**
   ತಾ.29-05-2010ರಂದು ನಡೆದ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ನಿರ್ಣಯ ಕೈಗೊಂಡಂತೆ ಪ್ರಾಥಮಿಕ ಸದಸ್ಯರಿಗೆ ಶೇ.10 ಲಾಭಾಂಶ (ಪಾಲು ಮುನಾಫೆ) ನೀಡಲಾಗಿದೆ. ಉಳಿತಾಯ ಖಾತೆ ಹೊಂದಿರುವ ಸದಸ್ಯರ ಖಾತೆಗಳಿಗೆ ಲಾಭಾಂಶವನ್ನು ಜುಲೈ ತಿಂಗಳಲ್ಲಿ ಜಮೆ ಮಾಡಲಾಗಿದೆ. ಉಳಿತಾಯ ಖಾತೆ ತೆರೆಯದೇ ಇರುವ ಸದಸ್ಯರು ಖುದ್ದಾಗಿ ಸೊಸೈಟಿಗೆ ಬಂದು ಲಾಭಾಂಶವನ್ನು ಪಡೆದುಕೊಳ್ಳಬಹುದು.
2. **ಉಳಿತಾಯ ಖಾತೆ ತೆರೆದರೆ ಒಳಿತು :**
   ಉಳಿತಾಯ ಖಾತೆ ತೆರೆಯದೇ ಇರುವವರು ಒಂಟಿಯಾಗಿ ಅಥವಾ ಜಂಟಿಯಾಗಿ (ಕುಟುಂಬಿಕರು) ಉಳಿತಾಯ ಖಾತೆ ತೆರೆದರೆ (ಕನಿಷ್ಠ ರೂ.100/- ಮೂಲಬಂಡವಾಳದೊಂದಿಗೆ) ಆಯಾ ವರ್ಷದ ಲಾಭಾಂಶವನ್ನು ಆ ಉಳಿತಾಯ ಖಾತೆಗೆ ಕೂಡಲೇ ಜಮೆ ಮಾಡಲಾಗುವುದು.
3. **ಲಾಭಾಂಶ ಪಡೆದುಕೊಳ್ಳಲು ವಾಯಿದೆ :**
   ಯಾವುದೇ ಒಂದು ವರ್ಷದ ಲಾಭಾಂಶವನ್ನು ಅದು ಘೋಷಿಸಲ್ಪಟ್ಟಂದಿನಿಂದ ಐದು ವರ್ಷದೊಳಗೆ ಪಡೆದುಕೊಳ್ಳತಕ್ಕದ್ದು. ಇಲ್ಲದಿದ್ದರೆ 5 ವರ್ಷಗಳ ನಂತರ ಅದನ್ನು ಸೊಸೈಟಿಯ ಶಾಸನಾತ್ಮಕ ಮೀಸಲು ನಿಧಿಗೆ ವರ್ಗಾಯಿಸಲ್ಪಡುತ್ತದೆ. **ಅಲ್ಲದೆ ಮುಂದೆ ಅದನ್ನು ಪಡೆಯಲು ಸದಸ್ಯರು ಬೇಡಿಕೆ ಸಲ್ಲಿಸುವಂತಿಲ್ಲ.**
4. **2005-06ರ ಪಾಲು ಮುನಾಫೆ :**
   ಇದನ್ನು ಪಡೆದುಕೊಳ್ಳಲು 2010ರ ಅಂತ್ಯದ ವರೆಗೆ ಮಾತ್ರ ಅವಕಾಶವಿದೆ.
6. **ಗುರುತು ಚೀಟಿ :**
   ಈ ವರೆಗೆ ಸೊಸೈಟಿಯ ಗುರುತು ಚೀಟಿ (ಐಡೆಂಟಿಟಿ ಕಾರ್ಡ್) ಪಡೆಯದೇ ಇದ್ದವರು ಪಾಸ್‌ಪೋರ್ಟ್ ಅಳತೆಯ ತಮ್ಮ 2 ಭಾವಚಿತ್ರಗಳನ್ನು ನೀಡಿ ಗುರುತಿನ ಚೀಟಿ ಪಡೆದುಕೊಳ್ಳಬಹುದು. ಭಾವಚಿತ್ರವನ್ನು ಈಗಾಗಲೇ ನೀಡಿರುವವರು ಸೊಸೈಟಿಗೆ ಬಂದು ಗುರುತಿನ ಚೀಟಿಯನ್ನು ಪಡೆದುಕೊಳ್ಳಬಹುದು.

**–ಕಾರ್ಯದರ್ಶಿ**

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org